4032

భద్రాయు చరిత్ర

NR
N22
4032

ಶ್ರೀ ಸ್ಕಾಂದ ಪುರಾಣಾಂತರ್ಗತ

# ಭದ್ರಾಯು ಚರಿತ್ರೆ

ಎಂಬ

# ಕೀರ್ತಿಮಾಲಿನೀ ಸ್ವಯಂವರವು.

ಉಡುಪಿ

ಬೈಲೂರು ಕೃಷ್ಣರಾಯ ನಾಯಕರಿಂದ ಪ್ರಕಟಿಸಲ್ಪಟ್ಟಿತು.

4506
10

ಉಡುಪಿ
ಪ್ರಭಾಕರ ಮುದ್ರಾಯಂತ್ರದಲ್ಲಿ ಮುದ್ರಿಸಲ್ಪಟ್ಟಿತು.

೧೯೨೨.

ಬೆಲೆ: 0—6—0; ಟ. ಖ. ಬೇರೆ.

(Copy-right Reserved).

4032

॥ ಜಯ ಶ್ರೀಶಂಕರ ಭಗವಾನ್ ॥

ಸ್ಕಾಂದಪುರಾಣಾಂತರ್ಗತ

# ಭದ್ರಾಯು ಚರಿತ್ರೆ

ಎಂಬ

# ಕೀರ್ತಿಮಾಲಿನೀ ಸ್ವಯಂವರ

ಇದು

ಬ್ರಹ್ಮಾವರ ಮಾಬುಕಳ "ವಾರಂಬಳ್ಳಿ ವೆಂಕಪ್ಪಯ್ಯ"ನವರಿಂದ ವಿರಚಿಸಲ್ಪಟ್ಟು

ಇದರ ಸಂಪೂರ್ಣ ಹಕ್ಕು ಸ್ವಾತಂತ್ರ್ಯವನ್ನು ಪಡೆದ
ಬೈಲೂರು "ಕೃಷ್ಣರಾಯ ನಾಯಕ"ರಿಂದ ಪ್ರಕಟಸಲ್ಪಟ್ಟಿತು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು

ಕರ್ಣಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಸಂಖ್ಯೆ 4032 ವರ್ಗ ಸಂಖ್ಯೆ........
ತಾರೀಖು........
ಬೆಲೆ........

ಉಡುಪಿ
"ಪ್ರಭಾಕರ ಮುದ್ರಾಯಂತ್ರ"ದಲ್ಲಿ
"ಪ. ನಾರಾಯಣ ಪ್ರಭು"ರಿಂದ ಮುದ್ರಿಸಲ್ಪಟ್ಟಿತು.

**1922.**

Price: 0—6—0] [ಕ್ರಯ: ೦—೬—೦

*(Copy Right Registered.)*

A 4032

NR N22

PRINTED BY P. N. PRABHU

AT THE PRABHAKARA PRESS, UDIPI.

॥ ಶ್ರೀರಸ್ತು ॥

॥ ಶ್ರೀ ಜಗದಾಂಬಾಯ ನಮಃ ॥

ಯಕ್ಷಗಾನ

## ಭದ್ರಾಯು ಚರಿತ್ರೆ ಎಂಬ ಕೀರ್ತಿಮಾಲಿನೀ ಸ್ವಯಂವರವು

**ವೃತ್ತ** ॥ ಯಾ ಮಾಯಾ ಮಧುಕೈಟಭ ಪ್ರಮಥಿನೀ ಯಾ ಮಾಹಿಷೋನ್ಮೂಲಿನೀ ।
ಯಾ ಧೂಮ್ರಾಸುರ ಚಂಡಮುಂಡಮಥಿನೀ ಯಾ ರಕ್ತಬೀಜಾಶನೀ ॥
ಯಾ ನೈಶುಂಭನಿಶುಂಭದರ್ಪದಳಿನೀ ಯಾ ಸಿದ್ಧಲಕ್ಷ್ಮೀಃ ಸ್ಥಿರಾ ।
ಸಾ ಚಂಡೀ ನವಕೋಟಿಮೂರ್ತಿ ಸಹಿತಾ ಮಾಂ ಪಾತು ವಿಶ್ವೇಶ್ವರೀ ॥ ೧ ॥

॥ ರಾಗ, ನಾಟಿ, ಝಂಪೆತಾಳ ॥

ಜಯ ಜಯತು ಗಣನಾಥ । ಜಯತು ಆಖುವರೂಥ । ಜಯ ಲೋಕ ಪ್ರಖ್ಯಾತ । ಜಯ ಗೌರೀಜಾತ ॥ ಜಯ ಜಯತು ಜಯತೂ ॥ ೧ ॥ ಸಾಮಜನಿಭ ವದನ । ವ್ಯೋಮಕೇಶನ ತರುಣ । ಸೋಮಶತನಿಭಕಿರಣ । ಭೀಮನುತ ಚರಣ ॥ ೨ ॥ ವಿಘ್ನಾಬ್ಧಿ ಕುಂಭಜನೆ । ವಿಘ್ನಗಜಕೇಸರಿಯೆ । ವಿಘ್ನ ಗಿರಿಕುಲಿಶ ನಿ । ರ್ವಿಘ್ನ ಮೂರುತಿಯೆ ॥ ಜಯ ॥ ೩ ॥ ॥ ೪ ॥

॥ ಭಾಮಿನಿ ॥

ಪರಮ ಪಾವನೆ ವಾಣಿ ವಾಗೀ । ಶ್ವರಿ ಸುರಾರ್ಚಿತೆ ಶಾರದಾಂಬಿಕೆ । ಕರುಣನಿಧಿ ನೀಯೆನ್ನ ನಾಲಗೆ ಕೊನೆಯೊಳ್ನೆಲಸುತಲೀ ॥ ವರಸುಚಂತೆಯ ನುಡಿಸು ತಪ್ಪುಗ । ಳಿರದ ತೆರದಲಿ ತಾಯೆ ನಿನ್ನಯ । ಚರಣಕಮಲಕೆ ಎರಗಿ ಬೇಡುವೆ ದೇವಿ ಕಲ್ಯಾಣೀ ॥ ೧ ॥ ॥ ೫ ॥

॥ ರಾಗ, ಕಾಂಬೋದಿ, ತ್ರಿವುಡೆತಾಳ ॥

ತ್ರಾಹಿ ಪಾರ್ವತೀಪ್ರೀತ । ತ್ರೈಲೋಕವ್ಯಾಪ್ತ । ತ್ರಾಹಿ ಸನಕಾದಿನುತ । ತ್ರಾಹಿ ದುರಿತಕರೀಂದ್ರಸಿಂಹನೆ । ತ್ರಾಹಿ ಗಂಗಾಧವನೆ ಶರ್ವನೆ । ತ್ರಾಹಿ ಭಕ್ತ ಕುಟುಂಬಿ ಎನ್ನನು । ತ್ರಾಹಿ ಸರ್ಪಾಭರಣಭೂಷನೆ ॥ ೧ ॥ ಆದಿಮೂರುತಿ ನಿನ್ನನು । ಪೂಜಿಸಲಘ । ಛೇದಿಸಿ ಪೊರವೆ ನೀನು । ಮಾಧವಾದಿ ಸುರೌಘವಂದಿತ । ವೇದ ಗೋಚರ ರುಂಡಮಾಲನೆ । ಪಾದಕೆರಗುವೆ ಶೂಲಪಾಣಿಯೆ । ಸಾದರದಿ ದಯ ದೋರಿ ರಕ್ಷಿಸು ॥ ೨ ॥ ಸಾಮಜ ದನುಜವೈರಿ । ಸರ್ವೇಶ್ವರ । ಸೋಮಾರ್ಧಧಾರಿ ಗಿರೀ । ಜಾಮನೋಹರ ಲೋಕವಿಶ್ರುತ । ಭೀಮಭರ್ಗ ತ್ರಿನೇತ್ರ ಶಂಕರ । ಸಾಮ ಗಾನವಿನೋದ ಪರಶಿವ । ಕಾಮನಾಶನೆ ಅಜಪುರೇಶನೆ ॥ ೩ ॥ ॥ ೬ ॥

॥ ವಸಂತತಿಲಕವೃತ್ತ ॥

ರಾಕಾಶಶಾಂಕವದನಂ ವಸುದೇವಬಾಲಂ । ನಾಕಾಧಿಪಾತ್ಮಜಸಖಂ ಕರುಣಾಲವಾಲಂ ॥ ಪಾಕಾರಿಯಗ್ನಿಜಲಜಾತ್ಮಜಮುಃಖ್ಯವಂದ್ಯಂ । ಲೋಕಾಶ್ರಯಂ ಯದುವರಂ ಕಲಯಾಮಿಚಿತ್ತೆ ॥ ೧ ॥ ॥ ೯ ॥

॥ ವಾರ್ಧಿಕ ॥

ಶೂರತನದಿಂದಲಾ ದಕ್ಷಿಣಾಂಭೋನಿಧಿಯ । ಹಾರಿ ಲಂಕೆಗೆ ಪೋಗಿ ಬಿಡದೆಲ್ಲ ಗೃಹಪುಡುಕಿ । ಚಾರುತರಮಾದಶೋಕಾವನದಿ ಸೀತೆಯಂ ಕಂಡು ಕೈಮುಗಿದು ಬಳಿಕ ॥ ಶ್ರೀರಾಮವೃತ್ತಾಂತ ಪೇಳಿಯುಂಗುರವಿತ್ತು । ಘೋರವಹ್ನಿಗೆ ದಾನವಿತ್ತು ದೈತ್ಯನ ಪುರವ । ಭೂರಿ ಹರುಷದಿ ಬಂದು ರಾಮಗೆರಗಿದ ಮುಖ್ಯಪ್ರಾಣ ನೀ ಸಲಹೆನ್ನನೂ ॥ ೧ ॥ ॥ ೧೦ ॥

॥ ದ್ವಿಪದಿ ॥

ಶುಕಗೆ ಶುಕತಾತನಾ ಬಾದರಾಯಣಗೆ । ಭಕುತಿಯಿಂದೆರಗುವೆನು ವಾಲ್ಮೀಕಿಮುನಿಗೆ ॥ ೧ ॥ ಗುಹಗಣಪರಿಂಗೆರಗಿ ಪರಮಭಕ್ತಿಯಲಿ । ಅಹಿಶಯುಸನರಸಿಯನು ನುತಿಪೆ ಹರುಷದಲೀ ॥ ೨ ॥ ಇಂದ್ರಾದಿ ದಿಕ್ಪಾಲರನು ಮನದಿ ನೆನದೂ । ಚಂದ್ರಸೂರ್ಯಾದಿ ನವಗ್ರಹರ ಭಜಿಸುವೆನೂ ॥ ೩ ॥ ಸನಕಾದಿ ಯೋಗಿಗಳ ಬಿಡದೆ ಭಜಿಸುತ್ತಾ । ವನಜಭವನಡಿಗೆ ಶಿರಬಾಗಿ ನಮಿಸುತ್ತಾ ॥ ೪ ॥ ತಂದೆ ತಾಯ್ಗಳ ಭಜಿಸಿ ಗುರುವಿನಡಿಗೆರಗೀ । ಚಂದದಲಿ ಕುಲದೇವಿ ಚಂಡಿಯನು ಭಜಿಸೀ ॥ ೫ ॥ ನಾರದಾದಿಗಳಿಂಗೆ ನಾನೆರಗಿ ಬೇಡಿ । ಮಾರವೈರಿಯ ಮಹಿಮೆ ಮನದಿ ಕೊಂಡಾಡೀ ॥ ೬ ॥ ವರಸ್ಕಾಂದಪೌರಾಣ ಚರಿತೆಯೊಳಗಿರುವ । ಶರಣು ಮಣಿ ಭದ್ರಾಯು ಚರಿತಕೌತುಕವ ॥ ೭ ॥ ಧರೆಯ ಜನರರಿವಂತೆ ಯಕ್ಷಗಾನದಲೀ । ಒರವೆ ನಾ ಭದ್ರಕಾಳಿಯ ಕರುಣದಲ್ಲೀ ॥ ೮ ॥ ಪ್ರಾಸು ಗಣ ಲಯ ಮಾತ್ರೆ ಹೇಗೆಂಬುದರಿಯೆ । ದೋಷ ಬಾರದ ತೆರದಿ ರಕ್ಷಿಸೈ ಹರಿಯೇ ॥ ೯ ॥ ॥ ೧೯ ॥

॥ ರಾಗ, ಸೌರಾಷ್ಟ್ರ, ತ್ರಿವುಡೆತಾಳ ॥

ಭೂಮಿಯೊಳಗತ್ಯಧಿಕವಾಗಿಹ । ನೈಮಿಷಾರಣ್ಯದಲಿ ಮುನಿಗಳು । ರೋಮಹರ್ಷನ ಸುತನ ಪದಯುಗ । ತಾಮರಸಕೇ ॥ ೧ ॥ ಎರಗಿ ಕೇಳ್ದರು ಯಾತಕೋಸುಗ । ಧರಣಿಪಾಗ್ರಣಿ ವಜ್ರಬಾಹುವು । ಅರಸಿ ಸುಮತಿಯ ಸುತನ ಸಹಿತಲೆ । ಕಾನನದಲೀ ॥ ೨ ॥ ಬಿಡಲು ಬಳಿಕಾ ಸುಮತಿದೇವಿಯು । ಅಡವಿಯೊಳು ಬಹು ಕಷ್ಟಪಡುತಲಿ । ಹುಡುಗನನು ತಾನೆಂತು ಪೊರೆದಳು । ತರಳೆಯಾಗಿ ॥ ೩ ॥ ಎಂತು ವೈಶ್ಯನ ಗೃಹವ ಸಾರ್ದಳು । ಎಂತು ಯೋಗೀವರ್ಯನೈದಿದ । ಎಂತು ತಾ ಭದ್ರಾಖ್ಯ ಬದುಕಿದ । ಮಡಿದ ಮೇಲೆ ॥ ೪ ॥ ಬಳಿಕ ನಿಷಧೇಶ್ವರನ ಕುವರಿಯು । ವಲಿಸಿ ಲಗ್ನವಗೈದ ಪರಿಯನು । ತಿಳುಹಬೇಕೆನೆ ಪೇಳ್ದ ಕಥೆಯನು । ಸೂತನಾಗ ॥ ೫ ॥



॥ ವಾರ್ಧಿಕ ॥

ಕೇಳಿರೈ ಮುನಿಗಳಿರ ವಜ್ರಬಾಹೂವೆಂಬ । ಶೀಲಗುಣವಂತನಾಗಿಹ ನೃಪನು ದಶಾರ್ಣ । ಭೂಲಲನೆಗರಸಾಗಿ ಸಕಲ ಸದ್ಧರ್ಮಂಗಳಿಂದಖಿಳ ಪ್ರಜೆಗಳನ್ನೂ ॥ ಪಾಲಿಸುತಲೆಜ್ಞಾದಿ ಸತ್ಕ್ರಿಯೆಗಳಂಗೈದು । ಫಾಲಾಕ್ಷನಂ ಭಜಿಸುತನುದಿನದೊಳಿರುತೀರ್ದ । ಲೋಲನುತಿಯೆಂಬ ನಿಜಮಂತ್ರಿಯಿಂದೊಡಗೂಡಿ ಪರಮ ಸಂತೋಷದಿಂದಾ ॥ ೧ ॥ ॥ ೨೫ ॥

॥ ರಾಗ, ಮಧುಮಾಧವಿ, ತ್ರಿವುಡೆತಾಳ ॥

ಇಂತಖಿಳ ವೈಭವದೊಳಿಹ ಭೂ । ಕಾಂತನಿಂಗರಸಿಯರು ಈರ್ವರು । ಕಾಂತಾಮಣಿ ವರ ಸುಮತಿ ದುರ್ಗುಣ । ವಂತೆ ದುರ್ಮತಿಯೆಂಬಳೂ ॥ ೧ ॥ ಹಿರಿಯರಸಿ ಗುಣವಂತೆ ಸುಮತಿಯು । ಕಿರಿಯಳಾ ದುರ್ಮತಿಯು ಭೂಪಗೆ । ತರುಣಿಮಣಿಯರು ರತಿಯ ಸೋಲಿಪ । ತೆರದ ರೂಪದಿ ಮೆರೆದರೂ ॥ ೨ ॥ ಈ ತೆರದೊಳತಿ ವಿಭವದೊಳಗಿಹ । ಭೂತಳೇಶನು ಪುತ್ರರಿಲ್ಲದೆ । ಕಾತರಿಸಿ ಕಂಗೆಟ್ಟು ಮರುಗಿದ । ನೀ ತೆರದಿ ಹಂಬಲಿಸುತಾ ॥ ೩ ॥ ಈರ್ವರರಸಿಯರಿರ್ದು ಫಲವೇ । ನೂರ್ವಿಯೊಳಗನಪತ್ಯನಾದೆನು । ಸರ್ವಜನನಿಂದಿಸುವರೆನ್ನನು । ದುರ್ವಿಧಿಯೆ ಹಾ ಕೆಟ್ಟೆನೂ ॥ ೪ ॥ ಮಕ್ಕಳಿಲ್ಲದ ಬಾಳ್ವೆ ಸುಡಲಿದು । ದುಃಖಭಾಜನನಾದೆ ಧರೆಯಲಿ । ಕಕ್ಕುಲಿತೆಯಿಂದನೆಂತು ತಾಳಲಿ । ರಕ್ಕಸಾರಿಯು ಮುನಿದನು ॥ ೫ ॥ ಶ್ರುತಿಯು ಸಾರ್ವುದು ಪುತ್ರಹೀನಗೆ । ಗತಿಯು ನಾಸ್ತಿಯು ಎಂಬ ಮಾತಿದು । ಪಿತರುಗಳು ಮುನಿದೆನ್ನ ಬೈವರು । ಗತಿಗೆಡುಕ ನೀನೆನುತಲೀ ॥ ೬ ॥ ಆರ ಮಕ್ಕಳ ಕೊಂದಿಹೆನೊ ತಾ । ನಾರಿಗಪಕಾರವನು ಗೈದೆನೊ । ಮಾರಮರ್ದನ ಮುನಿದನೆನ್ನಲಿ । ಯಾರಿಗುಸುರಲಿ ಕಷ್ಟವ ॥ ೭ ॥ ॥ ೩೨ ॥

॥ ಕಂದ ॥

ಇಳೆಯರಸನೀ ತೆರದಿಂದ । ಹಲವನು ಹಂಬಲಿಸಿ ಮರುಗುತಿರಲಾಗಳ್ ॥ ಜಲಜಾಂಬಕನನು ಸ್ಮರಿಸುತ । ಲಿಳಿದನಂಬರದಿಂದ ನೃಪನೆಡೆಗತ್ರಿಮುನಿಪಂ ॥ ೧ ॥ ॥ ೩೩ ॥

॥ ರಾಗ, ಸಾಂಗತ್ಯ, ರೂಪಕತಾಳ ॥

ಬಂದ ಮೌನೀಂದ್ರನ ಚರಣಕ್ಕೆ ವಂದಿಸು । ತಂದು ಪೀಠವಲಿ ಕುಳ್ಳಿರಿಸೀ । ಚಂದದಿ ಪಾದ್ಯಾರ್ಘ್ಯಾದಿಗಳಿಂದ ಪೂಜಿಸು । ತೆಂದನು ಭೂವರನಾಗ ॥ ೧ ॥ ಮುನಿವರ್ಯ ಕೇಳ್ನಿನ್ನ ದರುಶನದಿಂದೆನ್ನ । ಜನುಮ ಸಾರ್ಥಕವಾದುದೈಯ್ಯಾ । ಮನದಿಷ್ಟ ಸಿದ್ಧಿಸಿತಿನ್ನೇನು ಧರೆಯೊಳು । ಘನಪುಣ್ಯವಂತ ತಾನೆನಲೂ ॥ ೨ ॥ ಅರಸ ಕೇಳ್ನಿನ್ನಯ ಮನದನುತಾಪವ । ನಂದು ಬಂದನು ನಿನ್ನ ಬಳಿಗೆ ॥ ಕೊರತೆಯ

ಬಿಡು ನೀನು । ಹರನ ಕರುಣದಿಂದ । ತರಳ ಪುಟ್ಟುವನೈಯ ನಿನಗೇ ॥ ೩ ॥ ಇಂದಿನಾರಭ್ಯ ನಿನ್ನಯ ರಾಣಿ ಸುಮತಿಯು । ಇಂದುಧರನ ವ್ರತವನ್ನೂ ॥ ಚಂದದಿಗೈಯ್ಯಲು ಪರಮಾಯುಯುತನಾದ । ಕಂದನ ಪಡದಪಳಯ್ಯಾ ॥ ೪ ॥ ಆದಿಯೊಳತಿಕಷ್ಟವಾದರು ಕಡೆಯೊಳು । ಸಾಧಿಸಿ ಸತ್ಕೀರ್ತಿಯನ್ನು ॥ ಮೇಧಿನಿಯೊಳು ಪಡೆದಂತ್ಯದೊಳೈದುವ । ನಾ ದಯಾನಿಧಿ ಶಿವನೆಡೆಗೇ ॥ ೫ ॥ ಹೀಗೆಂದು ಸಕಲ ಸಂಗತಿಯನ್ನು ನೃಪತಿಗೆ । ಯೋಗೀಂದ್ರ ಪೇಳಿ ಸಂತೈಸೀ ॥ ನಾಗಭೂಷಣ ಸದಾಶಿವಮಾರಹರನೆಂದು । ಸಾಗಿದನಾಗಲಾಶ್ರಮಕೇ ॥ ೬ ॥ ॥ ೩೯ ॥

॥ ಭಾಮಿನಿ ॥

ಮುನಿಗಳಿರ ನೀವ್ ಕೇಳಿರತ್ತಿಯು । ಮನುಮಥಾರಿಯ ಭಜಿಸಿ ತೆರಳಲು । ಜನಪನಿತ್ತಲು ಹರುಷಶರಧಿಯೊಳಾಡಿ ತಾ ಬಳಿಕ ॥ ವನಜಲೋಚನೆಯಾದ ಸುಮತಿಯ । ವಿನಯದಿಂ ಕರೆಸಲ್ಕೆ ಬಂದಾ । ವನಿತೆ ಕೈಮುಗಿದೆರಗಿ ಬಿನ್ನೈಸಿದಳು ಕಾಂತನೊಳು ॥ ೧ ॥ ॥ ೪೦ ॥

॥ ರಾಗ, ಕಾಂಭೋದಿ, ಏಕತಾಳ ॥

ಪ್ರೀತಿಯಿಂದ ಲಾಲಿಸೈಯ್ಯಾ ಪ್ರಾಣಕಾಂತಾ । ನಿನ । ಗೀ ತೆರದ ಹರುಷವೇನು ಪ್ರಾಣಕಾಂತ ॥ ೧ ॥ ನಗೆಯು ಮಿನುಗುತಿಹುದು ಮುಖದಿ ಪ್ರಾಣಕಾಂತ । ಇದರ । ಬಗೆಯ ಎನ್ನೊಳ್ ದಯದಿ ಪೇಳು ಪ್ರಾಣಕಾಂತ ॥ ೨ ॥ ಕರುಣವೆನ್ನ ಮೇಲಿದ್ದರೆ ಪ್ರಾಣಕಾಂತ । ಮೋಹ । ದರಸಿಯೊಳು ಪೇಳು ನೀನು ಪ್ರಾಣಕಾಂತ ॥ ೩ ॥ ॥ ೪೩ ॥

॥ ರಾಗ, ಕೇತಾರ, ಗೌಳ, ಝಂಪೆತಾಳ ॥

ಹರಿಣಾಕ್ಷಿ ಕೇಳೆ ಬಾಲೇ । ನಾ ಪೇಳ್ವ । ಪರಿಗಳನು ಸುಗುಣಶೀಲೇ । ತರಳರಿಲ್ಲದ ದುಗುಡದಿ । ಇರಲತ್ತ । ವರ ಮುನಿಪ ಬಂದ ಭರದಿ ॥ ೧ ॥ ಬಂದ ಮುನಿಪನ ಪಾದದೀ । ಸಾಷ್ಟಾಂಗ । ವಂದನೆಯ ಗೈದು ಮುದದೀ ॥ ಚಂದದಿಂದುಪಚರಿಸಲು । ಬಳಿಕ ತಾ । ನೆಂದನೀ ಪರಿಯನ್ನೊಳು ॥ ೨ ॥ ನಿನ್ನರಸಿ ಶಿವವ್ರತವನು । ಗೈಯಲಾ । ಕನ್ನೆಗುದಿಸುವ ಕುವರನೂ । ತನ್ನೊಳಿಂತರುಹುತವನು । ಶಿವನಾಮ । ವನ್ನು ಜಪಿಸುತ ತೆರಳ್ದನೂ ॥ ೩ ॥ ನೀನಿಂದು ದೃಢಮನದೊಳು । ವ್ರತಗೈಯ್ಯೆ । ಸೂನು ಜನಿಸುವನು ಕೇಳು ॥ ಮೌನಿವರ್ಯನ ವಾಕ್ಯವೂ । ಸಟಿಯಾಗ । ದೇ ನಿತಂಬಿನಿಯೆ ನಿಜವು ॥ ೪ ॥ ॥ ೪೬ ॥

॥ ಭಾಮಿನಿ ॥

ಪ್ರಾಣಕಾಂತನ ನುಡಿಯ ಕೇಳ್ದಾ । ಮಾನಿನೀಮಣಿ ಸುಮತಿ ಹರುಷದಿ । ತಾನೆರಗಿ ಬಿನ್ನೈಸಿದಳು ನಿಜರಮಣನೊಡನಂದು ॥ ಮಾನನಿಧಿ ಕೇಳಿಂದು



ವ್ರತವನು । ಕ್ಷೋಣಿಯಮರರ ಕರೆಸಿ ಗೈಪೆನು । ಸೂನು ತನಗುದ್ಭವಿಪ ತೆರದೊಳಗೆಂದಳಾ ಕಾಂತೆ ॥ ೧ ॥ ॥ ೪೮ ॥

॥ ವಾರ್ಧಿಕ ॥

ಮುನಿಗಳಿರ ಕೇಳಿರೈ ಬಳಿಕಲಾ ತರುಣಿಮಣಿ । ಅನುದಿನದಿ ತದ್ವ್ರತವಗೈವುತಿಳೆಯಮರರಿಗೆ । ಧನಕನಕವಸ್ತುಗಳನಿತ್ತು ಭೋಜನದಿಂದ ತೃಪ್ತಿಪಡಿಸಿದಳಾಕೆಯೂ ॥ ಮುನಿಪ ಪೇಳಿದ ತೆರದಿ ಶಂಕರನ ದಯದಿಂದ । ವನಜಲೋಚನೆ ಗರ್ಭವನು ಧರಿಸಿ ಹರುಷದೋಳ್ । ಮಿನುಗಿ ಶೋಭಿಸುತಿರಲು ಜನಪಾಲ ತಾನಿರದೆ ಘನ ತೋಷವನು ತಾಳ್ದನು ॥ ೧ ॥ ॥ ೪೯ ॥

॥ ರಾಗ, ಮಾರವಿ, ಏಕತಾಳ ॥

ಇಂತಾನಂದದಿ ಗರ್ಭವನಾಂತಾ । ಕಾಂತೆಯು ಮಿನುಗುತಿರೆ ॥ ಅಂತರವರಿತು ಸೀ । ಮಂತವ ಗೈದ ಭೂ । ಕಾಂತನು ತಾ ಮುದದಿ ॥ ೧ ॥ ಬೇಕಾದ ಬಯಕೆಯ । ತರಿಸುತಲಾ ನೃಪ । ರಾಕೇಂದುಮುಖಿಗೆ । ತಾ ಕೊಡಿಸುತಲತಿ ॥ ಹರುಷದೊಳೀರ್ದನು । ಲೋಕೇಶನ ದಯದಿ ॥ ೨ ॥ ॥ ೫೧ ॥

॥ ಭಾಮಿನಿ ॥

ಧಾರುಣೀಸುರರಿತ್ತ ಕೇಳಿರಿ । ಭೂರಿ ವೈಭವದಿಂದ ಸುಮತಿಯು । ಚಾರುಗರ್ಭವ ಧರಿಸಿ ಮೆರೆಯುತ್ತಿರುವ ಸಮಯದಲೀ ॥ ಕ್ರೂರಕರ್ಮೆ ದುರಾತ್ಮೆ ಪಾಪಾ । ಚಾರಿ ದುರ್ಮತಿ ಕಂಡು ಸೈಸದೆ । ನಾರಿ ಹಲವನು ಗ್ರಹಿಸಿ ನುಡಿದಳು ತನ್ನೊಳಿಂತೆಂದು ॥ ೧ ॥ ॥ ೫೨ ॥

॥ ರಾಗ, ತೋಡಿ, ಅಷ್ಟತಾಳ ॥

ಈ ತೆರಾದುದೆನ್ನ ಬಾಳು । ರೀತಿಗೆಟ್ಟುದಕಟಕಟ । ಭೂತಳೇಶಗೆನ್ನ ಮೇಲೆ । ಪ್ರೀತಿಯಿಲ್ಲದಂತಾಯಿತು ॥ ೧ ॥ ಅಕ್ಕ ಗರ್ಭವಾಂತು ಮುದದಿ । ಚಿಕ್ಕವನ ಪಡೆಯದಿರಳು । ಲೆಕ್ಕಿಸನು ಕಾಂತನೆನ್ನ । ದುಃಖವೆಂತು ಸೈಸಲಿನ್ನು ॥ ೨ ॥ ಕೊಂದಲ್ಲದೆ ಸುಮತಿಯನ್ನು । ಪೊಂದೆನು ಸೌಖ್ಯವ ತಾನು । ಮುಂದೆ ತಾನೇನಾಗಲಿದ । ರಿಂದಲೆಂದು ಯೋಚಿಸಿದಳು ॥ ೩ ॥ ॥ ೫೫ ॥

ರಾಗ, ತಾಳ ( ವಿಷವಿಗೆ ಸಾಯದಾ ) ಎಂಬಂತೆ

ಈ ರೀತಿ ಯೋಚಿಸಿ ಪಾಪಿ ದುರ್ಮತಿಯಾಗ । ಕ್ಷೀರದೊಳ್ವಿಷವನ್ನು ಬೆರಕೆಯ ಗೈದು ॥ ಭೂರಿ ಕರುಣದೊಳೀವ ತೆರದಿಂದ ಕೊಡಲಾಗ । ನಾರಿ ಸುಮತಿಯದ ಕೊಂಡು ತಾ ಮತ್ತೆ ॥ ೨ ॥ ಗಿರಿಜೆಯರಸ ಸದಾಶಿವ ಮೃತ್ಯುಂಜಯ ಮಾರ । ಹರ ನಿನಗರ್ಪಿತವೆಂದು ತಾ ಕುಡಿಯೆ ॥ ೩ ॥ ಮಾಯಾಧೀಶನ ದಯದಿಂದಲಾ ತರುಣಿಯು । ಸಾಯದೆ ಬದುಕಿದಳೇನ ಪೇಳುವೆನು ॥ ೪ ॥ ಆದರಾ ವಿಷಬೇಗೆಯಿಂದಲಾ ಸತಿ ಬಹು । ವೇದನೆ ಪಡುತಿದ್ದಳತಿ ಕಷ್ಟದಿಂದ ॥ ೫ ॥ ॥ ೬೦ ॥

‖ ಕಂದ ‖

ತರುಣಿಯು ತಾ ವಿಷದುರುಬೆಗೆ । ಪರಿ ಪರಿ ಕಷ್ಟವನನುಭವಿಸುತ್ತಿರಲಾಗಳ್ ‖ ತರಳೆಗೆ ನವಮಾಸವು ತಾ । ಭರಿತವಾಗಲು ಬಳಿಕೊಂದಿನ ಸಖಿಯೊಡನಿಂತೆಂದಳ್ ‖ ೧ ‖ ‖ ೬೧ ‖

ರಾಗ, ತಾಳ ( ಹ್ಯಾಗೆ ತಾಳಲಮ್ಮಾ ) ಎಂಬಂತೆ

ಎಂತು ತಾಳಲಮ್ಮ । ಈ ವ್ಯೆಥೆಯ ನಾ । ನೆಂತು ತಾಳಲಮ್ಮ ‖ ಪಲ್ಲ ‖ ಕುಂತದಿಂದಿರಿದಂತೆ ಬಲು ಕಷ್ಟಮಪ್ಪುದು । ಕಂತುಹರನೆ ಬಲ್ಲ । ನಂತರಂಗದ ವ್ಯೆಥೆಯ ‖ ಎಂತು ‖ ಅನುಪಲ್ಲ ‖ ಹೇಗೆ ಬಾಳಲಿನ್ನು । ಈ ವೇದನೆ । ಹೇಗೆ ತಾಳಲಿನ್ನು ‖ ಬಾಗಿ ಕುಳ್ಳಿರಲಾರೆ । ಎದ್ದು ನಡಿಯಲಾರೆ । ನಾಗವೇಣಿಯೆ ಇದ । ನ್ಯಾರಿ ಗುಸುರಲಿನ್ನು ‖ ೧ ‖ ಉಂಡರುಬ್ಬಸವು । ಯನ್ನುದರದಿ । ಗುಂಡುಕಲ್ಲಿನೋಲು ‖ ದುಂಡಾಗಿ ತಿರುಗುತ್ತಲತಿ ಕಷ್ಟಮಪ್ಪುದು । ಪುಂಡರೀಕಾಕ್ಷಿ ಕೇಳ್ ಸಟೆಯನಾಡೆನು ನಿಜ ‖ ೨ ‖ ‖ ೬೪ ‖

‖ ವಾರ್ಧಿಕ ‖

ಬಾಲೆ ಈ ಪರಿಯಿಂದ ಪ್ರಸವ ವೇದನೆಯನ್ನು । ತಾಳಲಾರದೆ ದುಗುಡದಿಂದಿರ್ಪ ಪರಿಯರಿದು । ಭೂಲೋಲ ಶೂಲಗಿತ್ತಿಯ ಕರೆಸಿ ಕಳುಹಿದಂ ಸೂತಿಕಾಲಯಕೆ ಬೇಗ ‖ ಬಾಲೇಂದು ಫಾಲೆ ಶುಭಲಗ್ನದೋಳ್ಪಡೆದಳೈ । ಮೇಲಾದ ವ್ರಣರೋಗದಿಂದ ಕೃಶನಾಗಿರ್ಪ । ಬಾಲಕನೇನೆಂಬೆ ಗರಳದುರಿಯಿಂದಲೀ ಪರಿಯಾದುದಲ್ಲದುಂಟೆ ‖ ೧ ‖ ‖ ೬೫ ‖

‖ ರಾಗ, ತೋಡಿ, ಅಷ್ಟತಾಳ ‖

ಮಡದಿ ಹಡದಳೆಂಬ ವಾರ್ತೆಯ ಕೇಳುತ್ತ । ಪೊಡವಿಪಾಲಕನಾಕ್ಷಣ ‖ ನಡೆತಂದು ಕಂಡನು । ಶಿಶುವಿನ ರೀತಿಯ । ಕಡು ಚೋದ್ಯಬಡುತೆಂದನು ‖ ೧ ‖ ಏನಿದೇನಾಶ್ಚರ್ಯ ವ್ರಣಮಯವಾಗಿರ್ದ । ಸೂನು ತಾ ಜನಿಸಿತಲ್ಲಾ ‖ ಕಾಣೆನೀ ಪರೆಗಿಂತ ಪರಿಯ ನಾನೆಲ್ಲಿಯು । ಶ್ರೀನಿವಾಸನೆ ಬಲ್ಲನೂ ‖ ೨ ‖ ಪುತ್ರರಿಲ್ಲದೆ ಬಹು ಕಷ್ಟಗೊಳ್ಳುತಲಿರೆ । ಎತ್ತಣಿಂದುದಿಸಿತಿದು ‖ ಮತ್ತಕಾಸಿನಿ ಸಹ ವ್ರಣದಿಂದ ಕಂಗೆಟ್ಟು । ಶಕ್ತಿಗುಂದಿರುವಳೈಯ್ಯೊ ‖ ೩ ‖ ‖ ೬೮ ‖

‖ ರಾಗ, ನಾದಾನಾಮಕ್ರಿಯ, ಅಷ್ಟತಾಳ ‖

ಏನಿದೇನಾಶ್ಚರ್ಯವೀ । ಸೂನುವಿಂತು ಜನಿಸಿತಲ್ಲ । ಈ ನಿರೋದಕೇನ ಮಾಡಲಾನು ಶಿವಶಿವ ‖ ೧ ‖ ಪಾತಕಿಯು ನಾನಲ್ಲದ । ಡೀ ತೆರದ ಸುತನು ಎನಗೆ । ಜಾತನಹನೆ ತಿಳಿಯೆನಿದರ । ರೀತಿಯಕಟ ತಾ ‖ ೨ ‖ ‖ ೭೦ ‖



‖ ಕಂದ ‖

ಅವನಿಪನೀ ತೆರದಿಂದಂ । ಜವಗೆಡಿಸುವ ಚಿಂತೆಯಿಂದಿರಲಾಗಳ್ ‖ ತವಕದಿ ನಡೆತಂದಮಾತ್ಯನು । ಸುವಿವೇಕವ ಪೇಳ್ದ ಧರಣಿಪಗತಿ ಮುದದಿಂದಂ ‖ ‖ ೧ ‖ ‖ ೭೧ ‖

‖ ರಾಗ, ಮುಖಾರಿ ಝಂಪೆತಾಳ ‖

ಯಾಕಿಂತು ದುಃಖಿಸುವೆ ಜನಪ । ಲೋಕೇಶನಾಜ್ಞೆಯಂತಿಹುದೈಯ್ಯ ಲೋಕ ‖ ಪಲ್ಲ ‖ ವಾರಿಜೋದ್ಭವ ಪಣೆಯೋಳ್ ಬರದ ಬರಹವನು । ಮಿೀರಿ ಬಾಳುವರುಂಟೆ ಲೋಕದೊಳಗಿದನೂ ‖ ವಾರಿಜಾಕ್ಷಾದಿಗಳು ವಿಧಿಯ ವಶವಾಗಿಹರು । ಭೂರಮಣ ನೀನಿದಕೆ ಮರುಗಿ ಫಲವೇನು ‖ ಯಾ ‖ ೧ ‖ ಅರಿತ ಸುಜ್ಞಾನಿಗಳು ಅತಿಕಷ್ಟ ಬಂದರೆಯು । ಧರೆಯೊಳಗೆ ಧೃತಿಗೆಡದೆ ಸಹಿಸಿಕೊಂಡಿಹರು ‖ ಪರಶಿವನ ತಂತ್ರವಿದು ಅರಿತು ಮತಿಗೆಡದೆ ನೀ । ತರಳನಂಗವ ನೋಡಿ ಮರುಗಬೇಡರಸ ‖ ೨ ‖ ‖ ೭೩ ‖

‖ ವಾರ್ಧಿಕ ‖

ಮಂತ್ರಿಯಾಡಿದ ನುಡಿಯನಾಲಿಸುತಲವನೀಶ । ಚಿಂತೆಯನ್ನುಳಿದು ಸಲೆ ಧೈರ್ಯಮಂ ತಾಳ್ದು ನಿಜ । ಕಾಂತೆಸುತರಿಗೆ ವೈದ್ಯರಿಂದೌಷಧಿಯ ಗೈಸೆ ಫಲಬಾರದಿರಲು ಮತ್ತೆ ‖ ಮಾಂತ್ರಿಕರ ಮುಖದಿಂದ ಬಹು ಚಿಕಿತ್ಸೆಯ ನಡೆಸಲೆಂತೇನ ಗೈಯ್ಯೆ ಪರಿಣಾಮುವಾಗದೆ ಘನವ । ನಾಂತು ದಿನದಿನದೊಳಾ ವ್ರಣರೋಗ ಬೆಳೆವುತತಿ ಕಷ್ಟದೋಳಿರುತಿರ್ದರೂ ‖ ೧ ‖ ‖ ೭೪ ‖

‖ ಭಾಮಿನಿ ‖

ದಿನದಿನಕ್ಕತಿವೃದ್ಧಿಯಾಗುತ । ವ್ರಣವು ಕೀವುಕ್ರಿಮಿಗಳಿಂದಲಿ । ಘನತರದ ದುರ್ವಾಸನೆಯೊಳಸಹ್ಯವಾಗಿರಲು ‖ ಜನರು ಹತ್ತಿರ ಸಾರದಿರುತಿರೆ । ಮನುಜಪತಿ ತಾ ಕಂಡು ತನ್ನಯ । ಮನದಿ ಯೋಚನೆಗೈದು ಮಂತ್ರಿಯೊಳೆಂದನೀ ತೆರದಿ ‖ ೧ ‖ ‖ ೭೫ ‖

‖ ರಾಗ, ತಾಳ ‖

ಏನ ಮಾಡಲಿ ಪೇಳು । ಈ ವಿಧವಾದುದು ಬಾಳು । ಮಾನಿನೀಸುತರಿಗಿನ್ನೇನ ಮಾಡುವೆನು ‖ ೧ ‖ ಬಹು ಯತ್ನಗೈದರು । ಫಲವಾಗದಿರ್ದುದು । ಮಹಿಯೋಳು ತಾ ಕಡು । ಪಾಪಿಯೈ ನಿಜವು ‖ ೨ ‖ ದುರ್ವಾಸನೆಗಳಿಂದ । ಹೊಲಸಾಗಿ ತೋರ್ಪುದು । ಸರ್ವರು ನಿಂದಿಸಿ । ಸೇರರ್ಹತ್ತಿರಕೇ ‖ ೩ ‖ ‖ ೭೮ ‖

‖ ವಾರ್ಧಿಕ ‖

ಮಂತ್ರಿ ಕೇಳಿವರಿಂದ ಪರಿಣಾಮವಿಲ್ಲೆನಗೆ । ಅಂತರಂಗದೊಳು ನೀ ರಥದ ಮೇಲ್ಕುಳ್ಳಿರಿಸಿ । ಕಾಂತಾರಕೊಯ್ದಲ್ಲಿ ಬಿಟ್ಟು ಬಾರೆಂದೆನಲು ಕೈಮುಗಿವು

ತಿಂತೆಂದನೂ ॥ ಪಂಥಪೌರುಷವಲ್ಲ ನೀ ನುಡಿದ ಕಾರ್ಯವಿದು । ಕಂತುಮರ್ದನ ಮೆಚ್ಚ ನಿರಪರಾಧಿಗಳಾದ । ಕಾಂತೆಸುತರನು ಕಾಡಿನೊಳು ಬಿಡಲು ಜನರೆಲ್ಲ ಬೈದು ನಿಂದಿಪರು ನಿನ್ನ ॥ ೧ ॥ ॥ ೭೯ ॥

॥ ರಾಗ, ಸೌರಾಷ್ಟ್ರ, ತ್ರಿವುಡೆತಾಳ ॥

ಎನಲಮಾತ್ಯನೊಳೆಂದನಾಕ್ಷಣ । ಜನಪ ಕೇಳೈ ಮಂತ್ರಿ ನೀನಿಂ । ದೆನಗೆ ಪೇಳಿದ ಪರಿಯು ಬಲ್ಲೆನು । ಪೂರ್ಣವಾಗೀ ॥ ೧ ॥ ಧಾತ್ರಿಸುರರಲಿ ದ್ವೇಷವುಳ್ಳರ । ನಿತ್ಯ ದಾರಿದ್ರರ ಸುಜಾತ । ಮಿತ್ರ ಮೊದಲಾದರೊಳು ವೈರಿಗ । ಳಾದ ಜನರಾ ॥ ೨ ॥ ಅಂಗಹೀನತೆಯಾದವರ ನಿ । ರ್ಮಂಗಲರ ಸುತಹೀನರನು ಸ । ರ್ವಾಂಗ ಕುಳ್ಳಾಗಿಹರ ಬಿಡುವುದು ಶಾಸ್ತ್ರವಚನ ॥ ೩ ॥ ತಡವ ಮಾಡದಿರೈಯ್ಯ ಮಂತ್ರಿಯೆ । ಹುಡುಗ ಸಹಿತಾ ಸುಮತಿಯನು ಘೋ । ರಡವಿಯಲಿ ನೀ ಬಿಟ್ಟುಬಾರೈ । ನಡೆ ಯೆನಲ್ಕೆ ॥ ೪ ॥ ಒಡನೆ ಮಂತ್ರಿಯು ಮನದೊಳಗೆ ತಾ । ಕಡು ದುಗುಡವನು ತಾಳುತಾಕ್ಷಣ । ಜಡಜಲೋಚನೆ ಸುಮತಿಯೆಡೆಗೈ । ತಂದು ಬೇಗ ॥ ೫ ॥ ॥ ೮೪ ॥

ರಾಗ, ॥ ಅಷ್ಟತಾಳ ॥

ದೇವಿ ಲಾಲಿಸು ಎನ್ನ । ಮಾತನಿದನು ಮುನ್ನ । ಭೂವರೇಣ್ಯನು ಪೇಳ್ದ । ಪರಿಯಿದನೆಲ್ಲ ॥ ಈ ವಸುಧೆಯ ಹೊರ । ವಳೆಯದ ಕಾಡೊಳು । ದೇವಿ ಕಾಳಿಯ ಗುಡಿ । ಯಿಹುದಲ್ಲಿ ಕೇಳು ॥ ೧ ॥ ಆಯೆಡೆಗೀಗಲು । ನಿಮ್ಮಿರ್ವರನು ಕರ । ದೊಯ್ಯುಬೇಕೆಂದೆನ । ಗರುಹಿದ ನೃಪನು ॥ ಅಯುತಾಂಬಕಿ ಕಾಳಿ । ಕರುಣದಿಂದೀ ರೋಗ । ಮಾಯವಾಗುವದಮ್ಮ । ಸಟೆಯಲ್ಲ ನಿಜವು ॥ ೨ ॥ ಪೋಗಬೇಕಲ್ಲಿಗೆ । ರಥವೇರು ಬೇಗೆನೆ । ನಾಗವೇಣಿಯು ತನ್ನ ಬಾಲಕ ಸಹಿತ ॥ ಬೇಗದಿಂದಲಿ ರಥ । ವೇರಿ ಕುಳ್ಳಿರಲು ತಾ । ನಾಗ ಕೊಂಡೈದನು ಕಾನನಕಾಗೀ ॥ ೩ ॥ ॥ ೮೬ ॥

॥ ದ್ವಿಪದಿ ॥

ಲೋಲಮತಿ ಸಟೆಯ ನುಡಿಯಿಂದ ವಂಚಿಸುತ । ಬಾಲಕಿಯ ಕರದೊಯ್ದ ತರಳನನು ಸಹಿತ ॥ ೧ ॥ ಹುಲಿ ಕರಡಿ ಸಿಂಹ ಮದಕರಿ ವೃಕಗಳಿಂದ । ಬಲು ಭಯಂಕರವಾದ ವನಕೆ ಕರತಂದ ॥ ೨ ॥ ಒಂಬು ವಟವೃಕ್ಷದಡಿಯೊಳು ನಿಲಿಸಿ ರಥವ । ಮಂದಗಾಮಿನಿಯೊಡನೆ ಪೇಳ್ದನೀ ವಿಧವ ॥ ೩ ॥ ನಿನ್ನಂಗಕುರೆ ಹೇಸಿ ಧರಣಿಪಾಲಕನೂ । ಎನ್ನೊಡನೆ ಪೇಳ್ದ ಸುತ ಸಹಿತ ನಿನ್ನುವನು ॥ ೪ ॥ ಘೋರಡವಿಯೊಳು ಬಿಟ್ಟು ಬಾರೆಂದು ಎನಗೆ । ಧಾರುಣೀಶ್ವರ ಪೇಳ್ದ ಮಾರುವುದು ಹೇಗೆ ॥ ೫ ॥ ಇಳಿಯಮ್ಮ ರಥದಿಂದ ತರಳ ಸಹ ನೀನು । ಜಲಜಲೋಚನ ಹರಿಯು ಪೊರೆಯುವನು ತಾನು ॥ ೬ ॥ ॥ ೯೩ ॥



॥ ಭಾಮಿನಿ ॥

ಪವಿಯು ಹತಿಯಲಿ ಕುಲಶಿಲೋಚ್ಚಯ । ಭುವಿಯೊಳೊರಗುವ ತೆರದಿ ಮತ್ತಾ । ರವಿಯ ಕಿರಣದಿ ಬಾಡಿದೆಳಲತೆಯಂತೆ ಬಸವಳಿದು ॥ ಅವನಿಗೊರ ಗಲು ಕಂಡು ಸಚಿವನು । ಕುವಲಯಾಂಬಕಿ ಸುಮತಿಯನು ಮ । ತ್ತವಳ ಸುತನನು ಬಿಟ್ಟು ಪುರಕೈತಂದ ವಹಿಲದಲೀ ॥ ೧ ॥ ॥ ೯೪ ॥

॥ ಕಂದ ॥

ಲೋಲಾಖ್ಯನು ವನದೊಳಗಾ । ಬಾಲಕಿಯನು ಬಿಟ್ಟು ತಾ ತೆರಳಲ್ ಕಿತ್ತಲು ॥ ಲೋಲಾಕ್ಷಿಯು ಮೂರ್ಛೆಯ ತಿಳಿ । ದೇಳುತ ಕಾಣದೆ ಮಂತ್ರಿಯ ಹಲುಬಿದಳಾಗಲ್ ॥ ೧ ॥ ॥ ೯೫ ॥

॥ ರಾಗ, ನೀಲಾಂಬ್ರಿ, ಏಕತಾಳ ॥

ಹರಹರೆನ್ನಯ ವಿಧಿಯೆ । ಇಂತಾದುದಲ್ಲ । ಕೊರಳ ಕೊಯ್ದೆಯ ಮಂತ್ರಿಯೆ ॥ ಕರತಂದೀ ಕಾಡಿನೊಳು । ವಂಚಿಸಿ ಬಿಟ್ಟು । ತೆರಳಿದೆಯೆಂತು ಪೇಳು ॥ ೧ ॥ ಜನಪ ನೀನೀ ಪರಿಯ । ಗೈಯಲು ನಿನ್ನ । ಮನ ಬಂದುದೆಂತು ಜೀಯ ॥ ಘನಕಷ್ಟಗೊಳಿ ಸಿದೆಯ । ಸಹಿಸುವದೆಂತು । ವನದೊಳಗೀ ವ್ಯಥೆಯ ॥ ೨ ॥ ಬಲಹೀನೆಯಾದೆನ್ನನು । ವನದಿ ಬಿಡಲು । ಫಲವೇನು ಯನ್ನ ನೀನು ॥ ಕೊಲಿಸಿರ್ದರೊಳಿತಲ್ಲದೇ । ಬರಿದೆ ಮೋಸ । ದಲಿ ಎನ್ನ ಬಿಡಬಹುದೇ ॥ ೩ ॥ ಆರೆನ್ನ ರಕ್ಷಿಪರು । ಈ ಶಿಶುವನಿ । ನ್ನ್ಯಾರೀಗ ಪೋಷಿಪರು ॥ ದಾರಿಯು ಎನಗೆ ಮುಂದೆ । ತೋರದು ಹಾ ಹಾ । ಮಾರಾರಿ ಪೊರೆಯೊ ತಂದೆ ॥ ೪ ॥ ॥ ೯೯ ॥

॥ ರಾಗ, ನೀಲಾಂಬ್ರಿ, ರೂಪಕ ॥

ಏತಕೆ ಜನಿಸಿದೆ ತರಳನೆ । ಪಾತಕಿಯುದರದಿ ಶಿವಶಿವ । ಈ ತೆರನಾದುದೆ ಮುಂದಿ । ನ್ನೇತೆರ ಬಾಳುವದು ॥ ೧ ॥ ತರಳನೆ ನಿನ್ನಯ್ಯನು ನಿ । ಷ್ಕರುಣದೊಳೆ ಮ್ಮಿರ್ವರ ತಾ । ತೊರದಟ್ಟಿದನಟವಿಗೆಯಿದ । ನೊರೆಯುವದಿನ್ನ್ಯಾರ್ಗೆ ॥ ೨ ॥ ಅತ್ರಿಮುನೀಶನ ನೇಮದಿ । ಅರ್ತಿಯೊಳ್ ಶಿವನನು ಪೂಜಿಸಿ । ಪುತ್ರನೆ ನಿನ್ನನು ಪಡೆದೀ । ಹೊತ್ತಿನೊಳಿಂತಾಯ್ತೇ ॥ ೩ ॥ ಮದಕರಿ ಹುಲಿ ಸಿಂಹಗಳು । ಬೆದರಿಸಿ ಕೂಗುತ ಬರುವವು । ಮದನಾಂತಕ ಶಿವ ಶಂಕರ । ವಿಧುಧರ ಪುರಹರನೇ ॥ ೪ ॥ ॥ ೧೦೩ ॥

॥ ವಾರ್ಧಿಕ ॥

ಕೇಳಿರೈ ಮುನಿಗಳಿರ ಸುಮತಿ ತಾನೀ ತೆರದಿ । ಬಾಲಕನ ಮುದ್ದಾಡಿ ಹಂಬ ಲಿಸಿ ಮರುಗುತಿರೆ । ಖೂಳನಾಗಿಹ ಚೋರ ಕೈರಾತನೋರ್ವ ತಾನೈತಂದನಿವಳ ಬಳಿಗೆ ॥ ಬಾಲಕಿಯು ಧರಿಸಿಕೊಂಡಿರ್ದಖಿಳ ವಸ್ತುಗಳ । ಮೇಲೆ ಮನವೆಳಸುತದ

ನೊಯ್ಯುಬೇಕೆಂದವನು । ಬಾಲಕನ ತೊಡೆಯು ಮೇಲಿಟ್ಟು ಮರುಗುತ್ತಿರುವ ಆಯು ತಾಕ್ಷಿಯೊಳೆಂದನು ॥ ೧ ॥ ॥ ೧೦೪ ॥

॥ ರಾಗ, ಏಕತಾಳ, (ಆರೆಲೆ ಹುಡುಗಿ ನೀನು) ಎಂಬಂತೆ ॥

ನಾರಿ ನೀನ್ಯಾರು ಪೇಳೆ । ಘೋರಾರಣ್ಯದೊಳಿರುವೆ । ಬಾರೆ ನೀ ಎನ್ನ ಮನೆಗೆ । ಸೌಖ್ಯದೊಳಿಡುವೆ ॥ ಬಾರೇ ನೀ ಎನ್ನ ಮನೆಗೆ ॥ ೧ ॥ ಬಾಲನೀತನು ಯಾರೆ । ಪೇಳು ಎನ್ನೊಳು ನೀರೆ । ಚಾಳೀಸಿ ಪೇಳದಿರೆ । ಧೀರನು ಕಾಣೆ । ಚಾಳೀಸಿ ಪೇಳದಿರೆ ॥ ೨ ॥ ಹುಣ್ಣು ಕ್ರಿಮಿಗಳಿಂದ । ನಿನ್ನ ಮೈಯಂದ ಚಂದ । ಬಣ್ಣಗುಂದಿರುವದಲ್ಲ । ನೋಡಲು ಸಲ್ಲ ॥ ಬಣ್ಣಗುಂದಿರುವದಲ್ಲ ॥ ೩ ॥ ತಡವ ಮಾಡದಿರೇಳು । ಹುಡುಗಿ ಸಂಶಯ ಬಿಡು । ಕಡುಸುಖದೊಳಗಿಡುವೆ । ನಿಜವಾಗಿ ನುಡಿವೆ ॥ ಕಡುಸುಖದೊಳಗಿಡುವೆ ॥ ೪ ॥ ॥ ೧೦೮ ॥

॥ ಭಾಮಿನಿ ॥

ಚೋರನೀ ಪರಿಯಿಂದ ವಂಚನೆ । ದೋರಿ ನುಡಿಯುತ್ತಿರಲು ಬಳಿಕಾ ॥ ನಾರಿ ಸುಮತಿಯು ಮೊಗವನೆತ್ತದೆ ಮನದಿ ಪುರಹರನ ॥ ಚಾರುಪದಕಮಲವನು ಭಜಿಸುತ । ಭೂರಿ ಭಯದಿಂದಿರಲು ಕಂಡಾ । ಕ್ರೂರ ವ್ಯಾಧನು ನುಡಿದ ಘರ್ಜಿಸಿ ಹರಿಯ ತೆರನಂತೆ ॥ ೧ ॥ ॥ ೧೦೯ ॥

॥ ರಾಗ, ಮಾರವಿ, ಏಕತಾಳ ॥

ಎಲೆ ಎಲೆ ಪೋರಿಯೆ । ಛಲವಿದು ಸಲ್ಲದು ತಿಳಿದಿರು ಎನ್ನೊಡನೆ ॥ ಘಳಿಲನೆ ನೀ ಎ । ನ್ನಿಳಯಕೆ ಬಂದರೆ । ಒಳಿತಲ್ಲದಿರೀಗ ॥ ೧ ॥ ಖಡುಗದಿ ತಲೆಯನು । ಕಡಿದೀಕ್ಷಣದೊಳು । ಒಡವೆಗಳೆಲ್ಲವನು ॥ ಬಿಡದೊಯ್ಯುವೆನೆಂ । ದಡಿ ಮುಂದಿಡಲಾ । ದಡಿಗ ಖಳಾಧಮನು ॥ ೨ ॥ ಚೋರನು ಮುಂದೈತರುವದ ತಿಳಿದಾ । ನಾರಿಯು ಮನದೊಳಗೆ । ಮಾರಾಂತಕ ಪುರವೈರಿ ಸದಾಶಿವ। ಗೌರೀಶನೆ ಸಲಹೈ ॥ ೩ ॥

॥ ವಾರ್ಧಿಕ ॥

ತರುಣಿ ಈ ಪರಿಯಿಂದ ಹರನ ಪದಮಂ ಸ್ಮರಿಸಿ । ಶಿರವೆತ್ತಿ ಮುಂದೀರ್ಪ ದುರುಳನನ್ನೀಕ್ಷಿಸಲ್ । ಹರನ ನಯನಾಗ್ನಿಯೋಳ್ ಸ್ಮರನುರಿದುಪೋದಂತೆ । ವರಸುಮತಿನೇತ್ರಾಗ್ನಿಯು ॥ ದುರುಳನಂಗವ ಸುಟ್ಟು ಭಸ್ಮವಂಗೈದುದೈ । ಪರ ಶಿವನ ಶರಣರ್ಗೆ ಅಪಕೃತಿಯು ಗೈದವರು । ಧರೆಯೊಳ್ ಬಾಳುವದುಂಟೆ ಕೇಳಿರೈ ಮುನಿಗಳಿರ ನೀವೆಂದನಾ ಮುನಿಪನು ॥ ೧ ॥ ॥ ೧೧೩ ॥

॥ ರಾಗ, ಸಾಂಗತ್ಯ ॥

ದುರುಳನು ನಯನಾಗ್ನಿಯಿಂದುರಿದ್ಹೋಗಲ್ಕೆ । ಹರಿಣಾಕ್ಷಿ ಬಳಿಕ ತಾನಂದು । ಇರಬಾರದಿಲ್ಲೆಂದು ಬಾಲನ ಪಿಡಿದೆತ್ತಿ । ಹರಿತಂದಳೊಯ್ಯನೆ ಮರುಗಿ ॥



॥ ೧ ॥ ಮೆಲ್ಲಮೆಲ್ಲನೆ ನಡೆತರುತ ಮಾರ್ಗದೊಳಿಪ್ಪ । ಕಲ್ಲುಮುಳ್ಗಳಲಿ ಕಾಲೆಡಗಿ । ನಿಲ್ಲಲಾರದೆ ಮೂರ್ಛೆಯಾಂತು ಬಳಿಕೇಳುತ್ತ । ತಲ್ಲಣಗೊಳುತಳಲಿದಳೂ ॥ ೨ ॥ ನಡಿವೆನೆಂದರೆ ವ್ರಣಗಾಯದೊಳ್ಕಲ್ಮುಳ್ಗ । ಳೊಡನೆ ತಾಗುತಲೆನ್ನ ಕಾಯ । ನಡುಗುತೀರ್ಪುದು ಬಹು ನೋವು ಸೈರಿಸಲಾರೆ । ಮೃಡನೆ ಶಂಕರ ಪಾರ್ವತೀಶ ॥ ೩ ॥ ಇಲ್ಲಿಯೆ ಕುಳ್ಳಿಹೆನೆಂದರೀ ಅಡವಿಯೋಳ್ । ಖುಲ್ಲರಾಗಿಹ ಚೋರರಿಹರು । ಭಲ್ಲೂಕ ಮೊದಲಾದ ಮೃಗಗಳ ಭೀಕರ । ಸೊಲ್ಲ ಕೇಳಲು ಭೀತಿಯಹುದು ॥ ೪ ॥ ಸುದತಿ ಈ ರೀತಿ ಯೋಚಿಸುತಿಹ ಸಮಯದಿ । ಮುದಿಹಾರ್ವನೋರ್ವ ತಾನಾಗ ॥ ಬೆದರಿಕೆಯಿಂದ ಜಲ್ಹೊರುತ್ತ ಪೋಗುವ । ವಿಧವ ಕಂಡಾಗ ಪೇಳಿದಳು ॥ ೫ ॥ ॥ ೧೧೮ ॥

॥ ರಾಗ, ಕಾಪಿ, ಅಷ್ಟತಾಳ ॥

ಯಾರ್ರೈಯ್ಯಾ ಭೂಸುರವರ್ಯ । ಇಲ್ಲಿ । ಬಾರೈಯ್ಯ ಕೇಳೆನ್ನ ಪರಿಯ ॥ ಪಾರಮಾರ್ಥಿಯು ನೀನೆಂಬುದನು । ನಾನು । ನಾರಿಯಾದರು ತಿಳಿದಿಹೆನು ॥ ೧ ॥ ಮಾತ ಕೇಳ್ದಾಗ ಭೂಸುರನು । ಘನ । ಭೀತಿಯಿಂತಿರಿಗಿ ನೋಡಿದನು ॥ ಭೂತ ಪಿಶಾಚವ್ರೊ ಎನುತ । ಮೆಲ್ಲ । ನಾ ತರುಣಿಯೊಳೆಂದನೀತ ॥ ೨ ॥ ಬಾಲೆ ನೀನಾರವ್ವ ಪೇಳೆ । ಸಣ್ಣ । ಬಾಲಕನ್ಯಾರು ಸುಶೀಲೆ ॥ ಹಾಳಡವಿಯೊಳಿಹುದೇನು । ನಿನ್ನ । ಮೂಲವ ಪೇಳೆನ್ನೊಳ್ನೀನು ॥ ೩ ॥ ತನು ಬಹು ಕೃಶವಾಗಿ ಇಹುದು । ಮತ್ತೆ । ಘನವ್ರಣದಿಂದ ತುಂಬಿಹುದು ॥ ಅನುಮಾನವಿರಿಸದೆ ಎನ್ನೊಳು । ನಿನ್ನ । ಮನದೊಳೀರ್ಪುದನೆಲ್ಲ ಪೇಳು ॥ ೪ ॥ ॥ ೧೨೨ ॥

॥ ರಾಗ, ಘಂಟಾರವ, ಏಕತಾಳ ॥

ಕೇಳು ಕೇಳೈ ಭೂಸುರೋತ್ತಮನೆ । ಎನ್ನಂಗವೆಲ್ಲವ । ಪೇಳುವೆನು ನಿನ್ನೊಡನೆ ಗುಣಯುತನೆ ॥ ಶೀಲಗುಣಯುತ ವರದಶಾರ್ಣದ । ಭೂಲಲನೆಗರಸಾಗಿ ರಂಜಿಪ । ಕಾಲಕಂಠನ ಭಜಕನಾದ ನೃ । ಪಾಲ ವಜ್ರಭುಜನೆನ್ನರಸನು ॥ ೧ ॥ ಪುತ್ರರಿಲ್ಲದ ಶೋಕದಿಂ ನೃಪನು । ಇರುತೀರ್ಪ ಸಮಯದಿ । ಅತ್ರಿಮುನಿವರ ಬಂದು ಪೇಳಿದನು ॥ ಅತ್ರಿಯಿಂದಲಿ ನಿನ್ನರಸಿ ದೇ । ವ್ರೋತ್ತಮನ ವ್ರತವನ್ನುಗೈಯಲು । ಪುತ್ರನುದಿಸುವನೆಂದು ಆಶ್ರಮ । ದತ್ತ ಸಾರಲು ಗೈದೆ ವ್ರತವನು ॥ ೨ ॥ ಮೃಡನನುಗ್ರಹದಿಂದ ಗರ್ಭವನು । ಧರಿಸುತ್ತ ಬಳಿಕಾ । ಪಡೆದೆ ವ್ರಣಮಯವಾದ ಬಾಲನನು ॥ ಪೊಡವಿಪಾಲಕ ಬಂದು ನೋಡುತ । ಕಡು ದುಗುಡದಿಂ ಬಹು ಪ್ರಯತ್ನವ । ಒಡನೆ ಮಾಡಿಸಿ ಸುಪ್ರಯೋಜನ । ಪಡೆಯದೆನ್ನನು ಅಡವಿಗಟ್ಟಿದ ॥ ೩ ॥ ಕಪಟದಿಂದಾ ಮಂತ್ರಿಶೇಖರನು । ಶಿಶು ಸಹಿತಲೆನ್ನನು । ವಿಪಿನಕುರೆ ಕರೆತಂದು ಮತ್ತವನು ॥ ಕೃಪಣರಂದದಿ ಬಿಟ್ಟುಪೋಗಲು । ಉಪಚರಿಸುವವರಿಲ್ಲದಾನುರೆ । ತಪಿಸಿ ಮರುಗುತ್ತಿರಲು ಓರ್ವನು । ಕಪಟವ್ಯಾಧನು ಬಂದ

ಎನ್ನನು ‖ ೪ ‖ ಹಿಂಸೆಗೈಯುವೆನೆಂದು ಮುಂಬರಲು । ಭಯದಿಂದ ಯಜ್ಞ । ಧ್ವಂಸಕನ ನೆನದಕ್ಷಿ ತೆರೆಯಲು । ಹಿಂಸಕನು ನಯನಾಗ್ನಿಯುರಿಯೊಳು । ಧ್ವಂಸನಾಗಲು ಬಳಿಕಲೆನ್ನೀ । ವಂಶರತುನಕುಮಾರಕನು ಸಹ । ಸಂಶಯದೊಳೈತಂದೆ ನಿಲ್ಲಿಗೆ ‖ ೫ ‖ ‖ ೧೨೭ ‖

‖ ಭಾಮಿನಿ ‖

ಧಾರುಣೀಸುರವರ್ಯ ಲಾಲಿಸು । ಭೂರಿ ಶೋಕಾಬ್ಧಿಯೊಳು ಮುಳುಗಿಹ ‖ ನಾರಿಯಾದೆನ್ನುವನು ರಕ್ಷಿಸು ಕರುಣದಿಂದೊಲಿದು ‖ ಊರುಮನೆಗಳ ಸೇರುವರೆ ಸುಖ । ದಾರಿಯನು ನೀ ತೋರು ನಿನ್ನ ಪ । ದಾರವಿಂದಕೆ ಮಣಿದು ಬೇಡುವೆನೆಂದಳಾ ತರಳೇ ‖ ೧ ‖ ‖ ೧೨೮ ‖

‖ ರಾಗ, ಸಾವೇರಿ, ಅಷ್ಟತಾಳ ‖

ಎಂದು ಸುಮತಿ ಪೇಳಲು । ಭೂದೇವನು । ನೊಂದು ತಾ ದುಗುಡದೊಳು । ಚಂದಿರಾನನೆ ಬಿಡು ಬಿಡು ಈಗ ಶೋಕವ । ನಂದವಾಗಿಹ ಸ್ಥಳವ । ತೋರುವೆನವ್ವ ‖ ೧ ‖ ಅಂತಿಕದೊಳಗಿಹುದು । ಪಟ್ಟಣವೊಂದು । ದಂತಿಗಾಮಿನಿಯೆ ಮುಂದು ‖ ಕಂತು ಸಮಾಂಗ ಪದ್ಮಾಕರನೆಂಬ ಶ್ರೀ । ಮಂತನಾಗಿಹ ವೈಶ್ಯನು । ಅಲ್ಲಿಹನು ‖ ೨ ‖ ಪರಮ ಧಾರ್ಮಿಕನು ತಾನು । ಸತ್ಕರುಣಿಯು । ಪರಶಿವಾರಾಧಕನು ‖ ತರುಣಿ ನಿನ್ನನು ಪುತ್ರಿಭಾವದೊಳ್ಸಲಹುವ । ಹರುಷದಿ ತೆರಳು ಬೇಗ । ನಿಲ್ಲದಿರೀಗ ‖ ೩ ‖ ಬಾ ಎನ್ನ ಬೆಂಗಡೆಯೊಳ್ । ನಿನ್ನನು ಕರದೊಯ್ಯುವೆನೀಗಲೆಂದು । ಆಯತಾಂಬಕಿ ಸುಮತಿಯು ಮೆಲ್ಲಮೆಲ್ಲನೆ । ಆಯಮಿವರನು ತಾನು । ಕರೆತಂದನು ‖ ೪ ‖ ‖ ೧೩೨ ‖

‖ ಕಂದ ‖

ಇಂತಾನಂದದೊಳಾ ಕುಲ । ವಂತೆಯ ಕರೆತಂದಾ ಭೂಸುರವರ್ಯಂ ।
ಮುಂತಿರುತಿಹ ಪುರವನ್ನಾ । ಕಾಂತೆಗೆ ತೋರಿಸುತವಳೊಡನಿಂತೆಂದನಾಗಳ್ ‖ ೧ ‖

‖ ವಾರ್ಧಿಕ ‖

ತರುಣಿ ಕೇಳಾ ಹರಿಯ ಚರಣದಿಂದೊಗೆದವಳ । ಧರೆಗಿಳುಹಿತಂದವನ ಕುಲದೊಳುದಿಸಿರ್ದವನ । ತರುಣಿಯನು ಕೈತವದ ವಿದ್ಯೆಯಿಂದೊಯ್ದವನ ಹಿಡಿದು ಬಂಧಿಸಿದಾತನ ‖ ಕಿರಿಯನನು ಪೆತ್ತವನ ರಥದೊಳನವರತ ತಾ । ನಿರದೆ ಸಾರಥಿತನವ ಗೈವ ಪುಣ್ಯಾತುಮನ । ಪರಮಪಾವನವಾದ ನಾಮವೀ ಪುರಕೆಂದು ತೋರಿಸಿದನಾ ವಿಪ್ರನು ‖ ೧ ‖ ‖ ೧೩೪ ‖

‖ ಭಾಮಿನಿ ‖

ಮತ್ತಕಾಸಿನಿ ಸುಮತಿದೇವಿಯ । ಪತ್ತನಕೆ ಕರದೊಯ್ದು ವಿಪ್ರನು । ಅರ್ತಿಯಿಂದಾ ವೈಶ್ಯನರಮನೆಗಾಗಿ ನಡೆತರಲು ‖ ಭೃತ್ಯರಿಂದರಿದಿವರ ಗಮನದ । ವಾರ್ತೆ



ಯನು ನಡೆತಂದು ವಿನಯದಿ । ಪೃಥ್ವಿಯಮರನ ಪದಕೆ ವಂದಿಸಿ ಪೇಳ್ದ ಕೈಮುಗಿದು ‖ ೧ ‖ ‖ ೧೩೫ ‖

‖ ರಾಗ, ಕಾಂಬೋಧಿ, ಝಂಪೆತಾಳ ‖

ಆರು ನೀನೆಲೆ ಭೂಸುರಾ । ತರುಣಿಯಿವ । ಳ್ಯಾರೆಂಬುದೆನ್ನೊಳುಸುರಾ ‖ ಕಾರಣವದೇನು ಬರಲೂ । ಎನ್ನೆಡೆಗೆ । ಭೂರಿಕೃಪೆಯಿಂದಲುಸುರೂ ‖ ೧ ‖ ಚಾರುಲಕ್ಷಣದಿಂದಲೀ । ಶೋಭಿಪ ಕು । ಮಾರನಿವನಾರೆನುತಲೀ ‖ ಊರಾವುದಿವರ್ಗೆಂಬುದ । ಉಸುರೈಯ್ಯ । ಪಾರಮಾರ್ಥದಿ ನೀನಿದ ‖ ೨ ‖ ಇವರಂಗದೊಳಗೆ ವ್ರಣವೂ । ತುಂಬಿರುವ । ವಿವರವನು ಪೇಳೆನ್ನೊಳು ‖ ಕವಲುಮನ ಎನ್ನೊಳಿಲ್ಲ । ಧಿಟವಾಗಿ । ವಿವರಿಸೆನ್ನೊಳಗೆ ಸೊಲ್ಲ ‖ ೩ ‖ ನಾವು ದೇಶಿಗ ವಿಪ್ರರು । ನಮ್ಮ ಸ್ವ । ಭಾವವೇ ತಿರಿತಿಂಬುದು ‖ ಭಾವಕಿಯ ಪರಿಗಳನ್ನು । ನಿನಗೀಗ । ನಾ ವಿವರದಿಂದುಸುರ್ವೆನು ‖ ೪ ‖

‖ ರಾಗ, ಸುರುಟಿ, ಏಕತಾಳ (ಕೋಮಲಾಂಗಿ ಕೇಳೆ) ಎಂಬಂತೆ ‖

ಆರ್ಯವರ್ಯ ಸುಗುಣ । ಶರನಿಧಿ । ಆರ್ಯರಮಣಶರಣ ‖ ಆರ್ಯತೇಜನಾಗಿಹ ಪವಿಭುಜನಿಗೆ । ಭಾರ್ಯೆಯಾಗೀರ್ಪಳು ಸುಮತಿಯೆಂದುಸುರ್ವರು ‖ ೧ ‖ ಅತ್ರಿ ಅನುಗ್ರಹದಿ । ಪಡೆದಳೀ । ಪುತ್ರನ ತಾ ಮುದದೀ ‖ ಹೆತ್ತಾಗಳೆ ವ್ರಣಮಯವಾಗಿರುತಿರೆ । ಪೃಥ್ವಿಪ ಕಂಡತಿ ಚಿಂತೆಯ ತಾಳ್ದನು ‖ ೨ ‖ ಹಲವು ಪರಿಗಳಿಂದ । ಯತ್ನಿಸಿ । ಫಲವಿಲ್ಲದೆ ನೊಂದಾ ‖ ಬಳಿಕಿವರೀರ್ವರ ವಂಚಿಸಿ ಕಾಡಿಗೆ । ಕಳುಹಿದ ಕರುಣವ ತೊರದೇನೆಂಬೆನು ‖ ೩ ‖ ಆ ಕಾಡೊಳಗಿವಳು । ಸುತ ಸಹ । ಶೋಕದಿ ತಾನಿರಲು ‖ ನಾ ಕಂಡಿವಳನು ಕರದೈತಂದೆನು । ನೀ ಕರುಣಾನಿಧಿಯಾಗಿಹೆ ಎನುತಲಿ ‖ ೪ ‖ ಈ ಸುತ ಮಾತೆಯರ । ನೀಕ್ಷಿಸಿ । ನೀ ಸಲಹಲ್ಕಿವರ ‖ ಈಶನ ಕೃಪೆ ನಿನಗಾಗುವದೆಂದಾ । ಭೂಸುರ ಪೇಳಿದ ಪದ್ಮಾಕರನೊಳು ‖ ೫ ‖ ‖ ೧೪೪ ‖

‖ ವಾರ್ಧಿಕ ‖

ಹಾರುವನ ನುಡಿ ಕೇಳಿ ವೈಶ್ಯವರನಿಂತೆಂದ । ಧಾರುಣೀಸುರ ಕೇಳು ಧನ್ಯತಾನಾದೆನೀ । ನಾರಿಮಣಿ ಸುತ ಸಹಿತಲಿರಲೆನ್ನ ಭವನದೊಳು ಅನುಮಾನ ಬೇಡ ಇವರ ‖ ಪಾರಮಾರ್ಥದಿ ಪೊರೆವೆನೆಂದು ನಂಬುಗೆಯಿತ್ತು । ಭೂರಿದ್ರವ್ಯವ ಕೊಟ್ಟು ಕಳುಹಿ ಮತ್ತಿವರ ತಾ । ಚಾರುಭವನದೊಳಿರಿಸಿ ಸೇವೆಗನುಕೂಲವಾಗಿಹ ಜನರ ನೇಮಿಸಿದನು ‖ ೧ ‖ ‖ ೧೪೫ ‖

‖ ಭಾಮಿನಿ ‖

ಇಂತು ಪದ್ಮಾಕರನ ಗೃಹದೊಳು । ದಂತಿಗಾಮಿನಿ ತರಳ ಸಹಿತ । ತ್ಯಂತ ಸುಖದೊಳಗಿರಲು ಬಳಿಕನುದಿನದೊಳಾ ವೈಶ್ಯ ‖ ಮಾಂತ್ರಿಕರ ವೈದ್ಯರನು ಕರ

ಸುತ । ನಂತ ಯತ್ನವಗೈದು ಸುಫಲವ । ನಿಂತು ಕಾಣದೆ ಮನದಿ ಮರುಗುತ್ತಿರ್ದ ನನವರತ ॥ ೧ ॥ ॥ ೧೪೬ ॥

॥ ಕಂದ ॥

ದಿನದಿನಕ್ಕಾ ವ್ಯಾಧಿಯು । ಘನವಾಂತಾ ಬಾಲಕನೊಂದಿನ ಪಂಚತ್ವ । ವನು ಪಡೆಯಲು ಕಂಡಾಕ್ಷಣ । ಜನನಿಯು ತಾ ಮರುಗಿದಳತಿಕಷ್ಟದೊಳಾಗಳ್ ॥ ೧ ॥

॥ ರಾಗ, ನೀಲಾಂಬ್ರಿ ಏಕತಾಳ ॥

ಮಡಿದೆಯ ಹಾ ಹಾ ಮಗನೆ । ನುಡಿಯದೆ ಎನ್ನೊಳು ಸುತನೆ॥ ಕಡುಶೋಕಾ ಮಯವಾದೀ । ಕಡಲೊಳು ನೀ ನೂಕಿಸಿದೀ ॥ ೧ ॥ ಮೌನಗಳೇನಿದು ಇಂದು । ನೀನುಸುರೆನ್ನೊಡನಿಂದು ॥ ಏನಪರಾಧವ ಗೈದೆ । ಸೂನುವೆ ನೀನುಸುರದೆ ॥ ೨ ॥ ಈ ತೆರಗೈವರೆ ಚಿಣ್ಣ । ಮಾತನಾಡದೆ ಮುನ್ನ ॥ ಮಾತೆಯಲ್ಲವೆ ನಿನಗೆ । ಘಾತಿಸಿ ಪೋಪರೆ ಹೀಗೆ ॥ ೩ ॥ ಪಾತಕಿಯಾ ಜಠರದೊಳು । ಏತಕೆ ಪುಟ್ಟಿದೆ ಪೇಳು ॥ ಪ್ರೀತಿಯೋಳ್ಮೋಹದ ಕಂದ । ಮಾತಾಡೆನ್ನೊಡನೊಂದ ॥ ೪ ॥ ॥ ೧೫೧ ॥

॥ ಭಾಮಿನಿ ॥

ತರಳನೀ ಜನಿಸಲ್ಕೆ ಎನ್ನನು । ಧರಣಿಪತಿ ತಾ ತೊರದು ಗಹನಕೆ । ತೆರಳಿಸಿದ ಬಲು ಕಷ್ಟಪಟ್ಟೆನು ಕಂದ ನಿನ್ನಿಂದ ॥ ಪರನು ಭಾಗ್ಯದ ಕಂದರವೆ ನೀ । ಕೊರಳ ಕೊಯ್ದೈದುವರೆ ಹಾ ಹಾ । ಇರುವದೆಂತೀ ಧರೆಯೊಳಾನೆಂದೆನುತ ಮರುಗಿದಳು ॥ ೧ ॥ ಮಾನಿನೀಮಣಿ ಪುತ್ರಶೋಕವ । ನಾನಲಾರದೆ ಮರುಗಿ ಘೋಳಿಡೆ । ಏನಿದೇನೆಂದೆನುತ ಬಂದನು ವೈಶ್ಯವರನಾಗ ॥ ಈ ನಿರೋಧವ ಕಂಡು ಮರುಗುತ । ತಾನು ಧೈರ್ಯವ ತಂದು ಮೆಲ್ಲನೆ । ಆ ನಿತಂಬಿನಿಯೊಡನೆ ಪೇಳ್ದನು ಸಾನುರಾಗದಲೀ ॥ ೨ ॥ ॥ ೧೫೩ ॥

॥ ರಾಗ, ಆದಿತಾಳ ( ದೇವ ನೀ ಚಿತ್ತೈಸಿ ) ಎಂಬಂತೆ ॥

ದೇವಿ ಲಾಲಿಸಿ ಕೇಳು ಮರುಗದಿರಿನ್ನು । ಸಾವು ತಪ್ಪುವದುಂಟೆ ಪೇಳಿನ್ನೊಳ್ಳೀನು ॥ ತಾವರೆಕಂದನ ಬರಹವ ಮೀರಿ । ಭೂವಳಯದೊಳಾರು ಬಾಳುವ ನಾರಿ ॥ ೧ ॥ ಪೂರ್ವಜನ್ಮದಿ ಗೈದ ಪಾತಕಫಲವು । ಸರ್ವಗರ್ಗು ತಪ್ಪದು ತಾಯೆ ಕೇಳ್ನಿಜವು ॥ ಗೀರ್ವಾಣವರರನು ಬಿಡುವದಿದಲ್ಲ । ಪಾರ್ವತಿರಮಣನ ತಂತ್ರವಿದೆಲ್ಲ ॥ ೨ ॥ ತರಳನಿಂದೇನು ಆರಿಂದಲಿನ್ನೇನು । ನೆರೆ ಮಾಯ ಎಂಬುದನರಿಯೆಯ ನೀನು ॥ ಮರುಗಿದರಿನ್ನು ಬಹನೆ ಸುತನೀಗ । ಕರಕರೆ ಬಿಡು ಧೈರ್ಯ ತಂದುಕೊ ಬೇಗ ॥ ೩ ॥ ॥ ೧೫೬ ॥

॥ ವಾರ್ಧಿಕ ॥

ಕ್ಷೋಣಿಯಮರರೆ ಕೇಳಿ ಯಾರೇನ ಪೇಳಿದರು । ಮಾನಿನೀಮಣಿ ಸುಮತಿ ಸೈರಿಸದೆ ಕಡು ಮರುಗಿ । ಪ್ರಾಣವನು ಬಿಡುವೆನೆಂದುರುಪ್ರಯತ್ನವಗೈವ ಸಮಯ



ದೋಳ್ ಋಷಭಯೋಗಿ ॥ ಭಾನುತೇಜದಿ ಬರಲು ಕಂಡು ಕಮಲಾಕ್ಷಿ ದು । ಮ್ಮಾನದಿಂ ಪಾದದೋಳ್ಬಿದ್ದು ಮರುಗುತ್ತಿರಲು । ತಾನೆರಡು ಕೈಯಿಂದ ಪಿಡಿದೆತ್ತಿ ಕರುಣದೋಳ್ ಪೇಳ್ದನಾ ಮುನಿನಾಥನು ॥ ೧ ॥ ॥ ೧೫೭ ॥

॥ ರಾಗ, ಸಾಂಗತ್ಯ, ರೂಪಕತಾಳ ॥

ಮಗಳೆ ಮರುಗಬೇಡ ಅರಿತು ಬಂದೆನು ನಿನ್ನ । ಮಗನು ಮೃತಿಯನಾಂತ ಪರಿಯ ನಾನೀಗ ॥ ಅಗಜೆಯ ರಮಣನ ಶರಣರ್ಗೆ ಕಷ್ಟವು । ಜಗದಿ ಬಂದಪುದುಂಟೆ ಮುಗುದೆ ಕೇಳವ್ವ ॥ ೧ ॥ ಎಂದು ಧೈರ್ಯವ ಪೇಳಿ ಮೃತಿಯಾಂತ ಬಾಲನಿ । ಗಂದು ಕಮಂಡಲೋದಕವನ್ನು ತಳಿಯೆ ॥ ಕಣ್ದೆರದಾಕ್ಷಣ ಬಾಲಕ ನೇಳಲ್ಕೆ । ಮಂದಗಾಮಿನಿ ಕಂಡು ಕಡುತೋಷವಾಂತು ॥ ೨ ॥ ತಂದೆ ನಿನ್ನಯ ದಯದಿಂದಲಿ ಮೃತಿಯಾಂತ । ಕಂದ ಜೀವಿಸಿದನು ಸಂದೇಹವೇನು ॥ ಇಂದೀ ರೋಗವು ಪೋಗುವಂದವ ಗೈಯ್ಯಬೇ । ಕೆಂದೆರಗಿದಳ್ ಮುನಿಪಾಲನ ಪದಕೆ ॥ ೩ ॥ ಎನೆ ಕೇಳಿ ಮುನಿಪನು ಹರುಷವ ತಾಳುತ್ತ । ಘನಭಸ್ಮವನು ತೆಗದಾಕ್ಷಣ ತಳಿಯೆ ॥ ಜನನಿಸುತರಿಗಾಗ ವ್ರಣರೋಗ ಪೋಗಲು । ಜನರೆಲ್ಲ ಚೋದ್ಯವ ಪಡುತಿರ್ದರಲ್ಲೀ ॥ ೪ ॥ ಎಳೆನೇಸರಿನ ತೇಜದಿಂದ ಪೊಳೆವ ತನ್ನ । ಚಲುವ ಬಾಲನ ಕಂಡು ಮುದ್ದಿಸಿ ಬಳಿಕ ॥ ಘಳಿಲನೆ ಮುನಿಪನ ಚರಣಕ್ಕೆ ಮಣಿಯಲು । ಜಲಜಾಕ್ಷಿಯೊಳು ಪೇಳ್ದ ಋಷಭಯೋಗೀಂದ್ರ ॥ ೫ ॥ ॥ ೧೬೨ ॥

॥ ಭಾಮಿನಿ ॥

ಜಡಜಮುಖಿ ನೀ ಕೇಳು ನಿನ್ನಯ । ಹುಡುಗ ಸಹಿತೀ ವೈಶ್ಯಗೃಹದೊಳು । ಕಡುಹರುಷದಿಂದಿಹುದು ಬಹೆ ನಾ ಕೆಲವು ದಿನದೊಳಗೆ ॥ ಬಿಡದಿರಿವದಿರನೆಂದು ವೈಶ್ಯಗೆ । ನುಡಿದು ಬುದ್ಧಿಯನಾಗ ಯೋಗಿಯು । ನೃಡನ ಪದವನು ಭಜಿಸುತ ಡರಿದನಾಗಳಂಬರವ ॥ ೧ ॥ ॥ ೧೬೩ ॥

॥ ಕಂದ ॥

ಋಷಭಯೋಗೀಶ್ವರನು ತಾ । ಋಷಭಧ್ವಜನನು ಸ್ಮರಿಸುತ ತೆರಳಲಿಕಿತ್ತಲು ॥ ಬಿಸಜಾಂಬಕಿ ಸುಮತಿ ನಿಜ । ಶಿಶು ಸಹಿತಾ ವೈಶ್ಯನ ಮನೆಯೊಳಿರುತಿರ್ದಳ್ ॥ ೧ ॥ ॥ ೧೬೪ ॥

॥ ರಾಗ, ಮಧುಮಾಧವಿ, ತ್ರಿವುಡೆ ॥

ಇಂತು ಹರುಷದಿ ತರಳ ಸಹಿತಾ । ದಂತಿಗಾಮಿನಿ ವೈಶ್ಯಗೃಹದೊಳು । ಕಂತುಹರನನು ಸ್ಮರಿಸುತನುದಿನ । ಸಂತಸದೊಳಿರುತಿರ್ದಳು ॥ ೧ ॥ ದಿನದಿನಕ್ಕಾ ಶುಕ್ಲಪಕ್ಷದ । ವನರುಹಾರಿಯ ತೆರದಿ ಬಾಲನ । ತನು ಬೆಳವುತತಿ ಚೋದ್ಯವಾಗುದು । ಜನರ ಮನಕೇನೆಂಬೆನು ॥ ೨ ॥ ವರುಷವೈದಾಗಲ್ಕೆ ಬಾಲನು । ಸರಸಿಜಾಕರಸುತ ನೇತ್ರನ । ವೆರಸಿಯಾಡುತ್ತಿರಲು ನೋಡುತ । ಹರುಷಬಟ್ಟಳು ಮಾತೆಯು ॥ ೩ ॥

ನಿದ್ರೆಗೈದಿದ ಸಮಯ ಹೊರತಾ । ಮುದ್ದು ಬಾಲನು ನಿರತ ಗರಳವ । ಮೆದ್ದವನ ಸ್ಮರಣೆಯನು ಗೈವನು । ಶುದ್ಧಮಾನಸದಿಂದಲೀ ॥ ೪ ॥ ಆ ಪುರಸ್ತ್ರೀಯರು ಕುಮಾರನ । ರೂಪುಗುಣವೈಭವವ ಕಂಡುರೆ । ಸೋಪಚಾರವ ಗೈಯುತೀರ್ದರು । ತಾಪವಿಲ್ಲದೆ ಕರುಣದಿ ॥ ೫ ॥ ॥ ೧೭೯ ॥

॥ ಭಾಮಿನಿ ॥

ಈ ಪರಿಯೊಳಾ ವೈಶ್ಯಗೃಹದೊಳು । ಭೂಪಸುತ ತಾ ಹರುಷದಲಿ ಸಂ । ತಾಪವಿಲ್ಲದೆ ಬೆಳೆವುತಿರಲ್ಯಾತೆಂಟು ವತ್ಸರವು ॥ ತಾಪಹರ ಸರ್ವೇಶ ಜಯ ನಿ । ರ್ಲೇಪ ಶಂಕರ ಎನುತ ಬಂದನು । ತಾಪಸೋತ್ತಮ ಋಷಭಯೋಗಿಯು ಬಳಿಕ ಲಾಯೆಡೆಗೆ ॥ ೧ ॥ ॥ ೧೮೦ ॥

॥ ರಾಗ, ಕೇತಾರಗೌಳ, ಅಷ್ಟತಾಳ ॥

ಮುನಿಯು ಬರವ ಕಾಣು । ತ್ತಿದಿರೆದ್ದು ಸುಮತಿಯು । ತನೆಯ ಸಹಿತಲಾ ಕ್ಷಣ ॥ ವನಜಾಸ್ತ್ರವೈರಿಯ । ಪದಮಧುಕರನಿಗೆ । ವಿನಯದೊಳೆರಗಿದಳು ॥ ೧ ॥ ಯತಿವರ್ಯ ಕೇಳ್ಳಿಮ್ಮ । ದರುಶನದಿಂದಘ । ಹತವಾದುದೈ ನಿಜವು ॥ ಮೃತಿ ಯಾಂತ ತರಳಗೆ । ಜೀವದಾನವನಿತ್ತೆ । ಕ್ಷಿತಿಯೊಳಗತಿ ಚೋದ್ಯವು ॥ ೨ ॥ ತವ ಕೃಪೆಯಿಂದಲಿ । ವ್ರಣಮಯ ಕಾಯವು । ನವದೇಹವಾಯಿತಯ್ಯಾ ॥ ಭುವನ ದೊಳ್ನಿನಗೆಣೆ । ಯಾದವರನು ಕಾಣೆ । ಭವನಾಣೆ ಸಟೆಯಲ್ಲಯ್ಯಾ ॥ ೩ ॥ ಹರಿಣಾಕ್ಷಿ ಹರಿವಾಣಿ । ಹರಿವೇಣಿ ಹರಿಮಧ್ಯೆ । ಹರಿಣಾಂಕನಿಭವದನೆ ॥ ಹರಿಜನರನರಸಿ ನಿಭೆ । ಹರುಷದಿ ಲಾಲೀಸು । ಹರಿಯಾರ್ಚಿತನ ತಂತ್ರವು ॥ ೪ ॥ ಬಾಲೆ ಕೇಳ್ ತರಳಗೆ । ಭದ್ರಾಯುವೆಂದಿನ್ನು । ವೇಲೆಲ್ಲ ಕರ್ರೆಯಬೇಕು ॥ ಲೀಲೆಯಿಂದೀಗಲೆ । ಉಪ ನಯನವಗೈವೆ । ತಾಳದಿರ್ಚಿಂತೆಯನು ॥ ೫ ॥ ಎಂದುಪನಯನವ । ಗೈದು ತಾ ಬಾಲಗೆ । ಮುಂದೆ ಕುಳ್ಳಿರಿಸಿಕೊಂಡು ॥ ಚಂದದಿ ಚೌಷಷ್ಟಿ । ವಿದ್ಯವನರುಹಿದ । ಸಂದೇಹವಿಲ್ಲದಂದು ॥ ೬ ॥ ಸರ್ವಕಾಯುಧಿ ಸರ್ವ । ಕಾಲಸ್ಥಳಗಳಲ್ಲಿ । ಸರ್ವಾವ ಯವಗಳಲಿ ॥ ಶರ್ವ ರಕ್ಷಿಸಲೆಂದು । ಉಪದೇಶವನು ಗೈದ । ಶಿವಕವಚವನು ತಾನು ॥ ೭ ॥ ॥ ೧೮೧ ॥

॥ ವಾರ್ಧಿಕ ॥

ಇಂತನುಗ್ರಹಗೈದು ಸುಮತಿಗೆ ಜರೆ ಬಾಗ । ದಂತೆ ವರವಿತ್ತು ಪದ್ಮಾಕ್ಷಿ ನೊಡನೆಂದನೀ । ದಂತಿಗಾಮಿನಿಯ ತತ್ಸುತವ ಪಾಲಿಸು ನಿನಗೆ ಸಂತೋಷಮಪ್ಪು ದೆಂದು ॥ ತಾಂ ತಿಳುಹಿ ನಿಜಗತಿಗೆ ತೆರಳೆ ಬಳಿಕಿತ್ತಲಾ । ಕಾಂತೆ ಸುಮತಿಯು ತನ್ನ ಸುತ ಸಹಿತಲಿರೆ ಸುಖದಿ । ಮುಂತಾದ ಕಥೆಯ ವಿಸ್ತಾರವಂ ಕೇಳಿರೈ ನೀವೆಂದನಾ ಮುನಿಪನು ॥ ೧ ॥ ಅತ್ತಲಾ ಹೀರಭುಜನಾ ಕಿರಿಯ ಮಾನಿನಿಯು । ಕೃತ್ರಿಮ



ದೊಳಗ್ರಜೆಗೆ ವಿಷವಿತ್ತ ಕಾರಣದಿ । ಮೃತ್ಯುವಶವಾದಳೈ ಬಳಿಕವನ ರಾಷ್ಟ್ರದೊಳು ಪ್ರಜೆ ಸಕಲ ಪರಿವಾರವು ॥ ಅತ್ಯಧಿಕ ರೋಗರುಜೆಯಿಂ ಬಳಲುತಿರೆ ಕ್ಷಾಮ । ವೆತ್ತಲುಂ ತಲೆದೋರಿತೇನೆಂಬೆ ಸತಿಸುತರ । ಸತ್ಯಧರ್ಮವ ವಿಚಾರಿ ಪನಕಟ್ಟೆದುದ ರಿಂದಲಿಂತಾದುದಲ್ಲದುಂಟೆ ॥ ೨ ॥ ॥ ೧೮೨ ॥

॥ ರಾಗ, ಸೌರಾಷ್ಟ್ರ, ತ್ರಿವುಡೆತಾಳ ॥

ಇತ್ತಲೊಂದಿನ ಮಗಧ ಭೂಪಾ । ಲೋತ್ತಮನು ವರ ಹೇಮರಥ ತಾ । ನಿತ್ಯನೋಲಗ ಕರೆದು ಮಂತ್ರಿಯೊ । ಳ್ಬಿತ್ತರಿಸಿದ ॥ ೧ ॥ ಧೀರ ಸಚಿವೋತ್ತಮನೆ ಲಾಲಿಸು । ವೈರಿಗಳ ಹವಣರಿದು ಬರುವರೆ । ಚಾರಕರನಟ್ಟಹೆನು ಬರಲಿ । ಲ್ಲೇನು ಚೋದ್ಯ ॥ ೨ ॥ ಹಲವು ದಿನದಿಂ ಸಾಧಿಸುತ್ತಿಹೆ । ಕುಲಿಶಭುಜನನು ಜೈಸಿ ಮತ್ತವ । ನಿಳೆಯ ಕೈವಶಗೊಳಿಸಬೇಕೆಂ । ದೊಲವಿನಿಂದಾ ॥ ೩ ॥ ಎಂದು ಮಂತ್ರೀಶ್ವರನೊಳಾ ನೃಪ । ನಂದು ಪೇಳುತ್ತಿರಲು ಚಾರರು । ಬಂದು ವಂದಿಸಿ ಪೇಳ್ದರತ್ಯಾ । ನಂದ ದಿಂದಾ ॥ ೪ ॥ ॥ ೧೮೩ ॥

॥ ರಾಗ, ಏಕತಾಳ ॥

ರಾಜಾಧಿರಾಜ ಲಾಲಿಸೈಯ್ಯ । ಬಿನ್ನಪವ ಜೀಯ । ರಾಜಾಧಿರಾಜ ಲಾಲಿಸೈಯ್ಯ ॥ ಪ ॥ ಆ ದಶಾರ್ಣಪುರದೊಳಗೆ । ವ್ಯಾಧಿ ರುಜೆ ಕ್ಷಾಮದಿಂದ । ಬಾಧೆ ಯಾಂತು ಜನರೆಲ್ಲರು ಮಡಿದರು । ಭೇದಿಸಿ ವೈರಿಯ ಗೆಲುವರೆ ಪಳೈ ॥ ೧ ॥ ಬಲ ಗಳೆಲ್ಲ ನಾಶವಾಗಿ । ಬಲುಚಿಂತೆಯಿಂದಿಹನು ಪೋಗಿ । ಛಲದೊಳಗಾ ಪವಿಭುಜ ನನು ಸೋಲಿಸಿ । ಗೆಲುವಕೀಗಲೆ ಸಮಯವು ಕೇಳೈ ॥ ೨ ॥ ಸಟೆಯು ನುಡಿವರಲ್ಲ ಜೀಯ । ಧಿಟವಿದೀಗ ಲಾಲಿಸೈಯ್ಯ । ಪಟುಭಟರೆಲ್ಲರ ಕೂಡಿ ನೀ ಪೋಗುತ । ಶಠ ಪವಿಭುಜನನು ಹಿಡಿತಾರೆಂದರು ॥ ೩ ॥ ॥ ೧೮೪ ॥

॥ ರಾಗ, ಕೇತಾರಗೌಳ, ಝುಂಪೆ ॥

ಚಾರಕರ ನುಡಿ ಕೇಳುತ । ಹೇಮರಥ । ಭೂರಿ ಹರುಷವ ತಾಳುತ । ಧೀರ ಮಂತ್ರಿಯ ನೋಡುತ । ಪೇಳ್ದನೀ ವಾರತೆಯನೆಲ್ಲ ಮತ್ತ ॥ ೧ ॥ ಕೇಳೈಯ್ಯ ಮಂತ್ರಿ ಬೇಗ । ವೈರಿ ಭೂ । ಪಾಲನನು ಗೆಲುವಡೀಗ । ಮೂಲಬಲ ಸಹ ಪೊರಡಲಿ । ತಡಮಾಡ । ದೇಳು ನೀನರೆಕ್ಷಣದಲಿ ॥ ೨ ॥ ಎಂದಖಿಳ ಶರಗಳನ್ನು । ಧರಿಸಿ ನೃಪ । ಸ್ಯಂದನವನೇರಿ ತಾನು । ಮುಂದಿವಾರ್ಬಲ ಕೂಡುತ । ಪೊರಟನಾ । ನಂದದಿಂದಾಗ ಖ್ಯಾತ ॥ ೩ ॥ ॥ ೧೮೫ ॥

॥ ಭಾಮಿನಿ ॥

ನಿಧಿಯ ಶಂಕೆಯ ಕ್ಷೋಹಿಣೀ ಬಲ । ವದಗಿಸುತ ಹರಿನಾದದಿಂದಲಿ । ಉದಧಿಘೋಷದಿ ಬಂದು ಮುತ್ತಿದ ವೈರಿದುರ್ಗವನು ॥ ವಿಧವ ಕಂಡಾಕ್ಷಣದಿ

ಚಾರರು । ಬೆದರಿ ನಡೆತಂದಾಗ ಒಡೆಯನ । ಪದಕೆ ನಮಿಸುತ ಪೇಳ್ದರೀ ವಾರ್ತೆಯನು ಬೇಗದಲಿ ॥ ೧ ॥ ॥ ೧೯೦ ॥

॥ ರಾಗ, ಕಾಪಿ, ಅಷ್ಟತಾಳ ॥

ಕೇಳು ದಶಾರ್ಣ ಭೂನಾಥ । ನಿನ್ನೊಳ್ । ಪೇಳುವ ಮಾತುಗಳನು ವಿಖ್ಯಾತ ॥ ಪ ॥ ಮಗಧ ಭೂನಾಥನು ಬಲವ । ಕೂಡಿ । ಜಗಳಕ್ಕೈತಂದೆಮ್ಮ ದುರ್ಗ ಮುತ್ತಿರುವ । ಬಗೆಯು ಬಣ್ಣಿಸಲಳವಲ್ಲ । ಇದ । ನಗಜೆಯರಸನೋರ್ವ ಬಲ್ಲ ಸುಳ್ಳಲ್ಲ ॥ ೧ ॥ ಎತ್ತ ನೋಡಿದಡತ್ತ ಸೇನೆ । ಸುತ್ತ । ಮುತ್ತಿಕೊಂಡಿಹುದೈಯ್ಯ ಪುರವ ನಿನ್ನಾಣೆ । ಯತ್ನಯೇನೆಂಬುದ ನೋಡು । ಕ್ಷಣ । ಹೊತ್ತು ಕಳೆಯಲೀಗ ಬರುವದು ಕೇಡು ॥ ೨ ॥ ॥ ೧೯೨ ॥

॥ ಭಾಮಿನಿ ॥

ಕೇಳಿ ಚಾರರ ನುಡಿಯ ಭೂಪತಿ । ಕಾಲಭೈರವನಂತೆ ಘರ್ಜಿಸಿ । ಲೋಲಮತಿಯೊಳು ಪೇಳ್ದ ಬಲವನು ಕೂಡಿಸೀಕ್ಷಣದಿ ॥ ಖೂಳ ಮಗಧೇಶ್ವರನು ಪಿಂದಣ । ಕಾಳಗದ ಪರಿ ಮರೆದು ಬಂದನು । ಶೀಳಿ ತೆಗೆವೆನು ಕರುಳನೆಂದೆನುತಾಗ ಹೊರವಂಟಾ ॥ ೧ ॥ ॥ ೧೯೩ ॥

॥ ವಾರ್ಧಿಕ ॥

ಭೂರಿಗಜರಥಹಯಪದಾತಿಗಳ ಕೂಡಿ ರಣ । ಭೇರಿ ತಮ್ಮಟೆ ಕಹಳೆ ವಾದ್ಯರವದಿಂದ ದಿ । ಗ್ವಾರಣಗಳ್ತಲೆಗುತ್ತೆ ವಾರಿಧಿಯ ಘೋಷದಿಂದ್ಯೆತಂದು ಪುರವ ಮುತ್ತಿ ॥ ಸೂರೆಗೈವುತ್ತಿರುವ ವೈರಿಬಲವಂ ಕಂಡು । ಹೀರಭುಜ ಕೋಪದಿಂ ಕಡಿದು ಕೆಡವುತ್ತಿರಲು । ಧೀರನಾಗಿಹ ಹೇಮರಥನ ಮಂತ್ರಿಯು ತಡದು ಘರ್ಜಿಸುತಲಿಂತೆಂದನು ॥ ೧ ॥ ॥ ೧೯೪ ॥

॥ ರಾಗ, ಪಂಚಾಂಗತಿಮಟ್ಟೆ ॥

ಅರರೆ ನೃಪತಿ ಸೈರಿಸೀಗ ಪರಿಕಿಸೆನ್ನನು । ಧುರದೊಳೀಗ ನಿನ್ನ ಶಿರವ ತರಿದು ಬಿಡುವೆನು ॥ ವರವಿಖ್ಯಾತ ಹೇಮರಥನ ಮಂತ್ರಿಯಾಗಿಹೆ । ಬರಿದೆ ಕೆಡಲುಬೇಡ ಪಾದಕೆರಗು ಸಾರಿದೆ ॥ ೧ ॥ ಬಗುಳಬೇಡ ಸಾಕು ಬಲ್ಲೆ ನಿನ್ನ ದುರುಳನೆ । ಸಿಗಿದು ಭೂತಗಣಕೆ ಬಲಿಯ ಕೊಡುವೆ ಗಮ್ಮನೆ ॥ ಬಗೆಯ ನೋಡೆನುತ್ತಲಾಗಲದ್ರಿಶರವನು । ತೆಗೆದುಬಿಡಲು ಕಂಡು ಮಂತ್ರಿ ಕುಲಿಶಶರದೊಳು ॥ ೨ ॥ ಕಡಿದುವಹ್ನಿಶರವ ಬಿಡಲು ಕೋಪದಿಂದಲಿ ॥ ಘುಡುಘುಡಿಸಿ ವರುಣಶರದಿ ತರಿದ ಕ್ಷಣದಲಿ ॥ ಒಡನೆ ಮಂತ್ರಿ ತಿಮಿರಶರವ ಬಿಡಲು ನೋಡುತ । ಜಡಜಮಿತ್ರ ಶರವನೆಚ್ಚ ಪೊಡವಿ ಪಾಲಕ ॥ ೩ ॥ ॥ ೧೯೭ ॥

॥ ಭಾಮಿನಿ ॥

ತರಣಿಶರಹತಿಯಿಂದ ಮಂತ್ರಿಯು । ಧರೆಗೆ ಮೂರ್ಛೆಯನಾಂತು ಬೀಳಲು । ಪರಿಯ ಕಂಡಾಕ್ಷಣದಿ ಪಲ್ಗಡಿಯುತ್ತ ಹೇಮರಥ ॥ ಕರದಿ ಧನುವನು ಪಿಡಿದು



ಪ್ರಳಯದ । ಹರನ ತೆರದಲಿ ಘರ್ಜಿಸುತ್ತಲಿ । ಭರದಿ ಬಂದಾ ವಜ್ರಭುಜನೊಡನೆಂದ ಶೌರ್ಯದಲಿ ॥ ೧ ॥ ॥ ೧೯೮ ॥

॥ ರಾಗ, ಭೈರವಿ, ಅಷ್ಟತಾಳ ॥

ಧುರದೊಳಮಾತ್ಯನನು । ಗೆಲಿದೆನೆಂಬ । ಗರುವ ಸಲ್ಲದು ನಿನ್ನನು । ತರಿದು ಮರುಳು ಭೂತಗಳಿಗೆ ಬಲಿಯನೀವೆ । ಪರಿಕಿಸೊ ಚೋರ ನೀನು ॥ ೧ ॥ ಚೋರ ನಾನಲ್ಲ ಕೇಳು । ತಿಳುಹದೆ ಕಳ್ಳ । ದಾರಿಯೊಳ್ ಬಂದೀಗಳು । ಈ ರೀತಿಯಿಂದೆಮ್ಮ ಪುರವ ಮುತ್ತಿದೆ ಗುರು । ಯಾರೆಂಬುದುಸುರೆನ್ನೊಳು ॥ ೨ ॥ ಬೇಡ ನಿನಗೆ ಸಾರಿದೆ । ಯುದ್ಧವನೆನ್ನೊಳ್ । ಮಾಡದಿರೆಲೊ ಬರಿದೆ । ತೋಡಿ ತೆಗೆವೆ ನಿನ್ನ ಕರುಳನು ನಾನೀಗ ॥ ಗಾಢದಿ ನೋಡ್ ಭಂಡನೆ ॥ ೩ ॥ ಭಂಡತನವು ನಿನ್ನೊಳು । ಇರಲು ಪರರ । ಕಂಡು ನೀ ನಗುವದೇನೊ ॥ ಪುಂಡ ನೀ ಮೊದಲೊಂದು ಭಾರಿ ಯುದ್ಧದಿ ಸೋತ । ಷಂಢ ಸಾರೆಂದೆಚ್ಚನು ॥ ೪ ॥ ಅಂದು ಗೆಲಿದ ಗರ್ವವ । ನಿಲಿಸುವೆನೀಗ । ಛೊಂದೆ ಶರದಿ ಶೌರ್ಯವ । ಕುಂದಿಸಿ ಕೈಸೆರೆ ಪಿಡಿದೀಗಳ್ಕೊವೆನಾ । ನೆಂದೆಚ್ಚನಹಿಶರವ ॥ ೫ ॥ ॥ ೨೦೩ ॥

॥ ರಾಗ, ಮಾರವಿ, ಏಕತಾಳ ॥

ಉರಗಾಸ್ತ್ರವ ಬಿಡೆ ಕಾಣುತ ಪವಿಭುಜ । ಗರುಡಾಸ್ತ್ರದಿ ತರಿದು । ಉರಿಯಾಸ್ತ್ರವ ಪಿಡೆ ಹೇಮಾಕ್ಷ್ಯನು ತಾ । ವರುಣಾಸ್ತ್ರದಿ ಕಡಿದು ॥ ೧ ॥ ಶೈಲಾಸ್ತ್ರವ ಬಿಡೆ । ಕುಲಿಶಾಯುಧದೊಳು ಶೀಳುತಲಾ ನೃಪನು । ಭಾಳಾಂಬಕನಂದದಿ ಘರ್ಜಿಸಿ ತಾ । ನೇಳಂಬಿನೊಳೆಸೆದ ॥ ೨ ॥ ಎಚ್ಚ ಶರವ ತರಿದಾಕ್ಷಣ ಪ್ರತಿಶರ । ವೆಚ್ಚರಿರಥನನ್ನು । ಕೊಚ್ಚುತ ನಿಮಿಷದಿ ವಿರಥನ ಮಾಡಲು । ಆ ಕ್ಷಣ ಪವಿಭುಜನು ॥ ೩ ॥ ಖಡುಗವ ಪಿಡಿದುರೆ ಕೋಪದಿ ಶಿರವನು । ಕಡಿವೆನೆನುತ ಬರಲು । ಕಡುಬೇಗದೊಳದ ತುಂಡಿಸೆ ಕಂಡಾ । ಪೊಡವಿಪ ಗದೆ ಪಿಡಿದು ॥ ೪ ॥ ಕುಟ್ಟುವೆ ಶಿರವನೆನುತ್ತಲೆ ಬರುತಿರೆ । ತಟ್ಟನೆ ಹೇಮಾಕ್ಷ್ಯ । ದಿಟ್ಟತನದಿ ತಾ ಶಳೆದಾ ಗದೆಯ ಮುಟ್ಟ ಹಿಡಿದ ಸೆರೆಯ ॥ ೫ ॥ ॥ ೨೦೮ ॥

॥ ವಾರ್ಧಿಕ ॥

ಧರಣಿಪನ ಕೈಸೆರೆಯ ಪಿಡಿಯೆ ಕಂಡುಳಿದ ಬಲ । ವಿರದೆ ಭಯದಿಂದೋಡುತಿರಲಾಗ ಹೇಮಾಕ್ಷ । ಪುರವ ತನ್ನೊಶಗೈವುತಖಿಳ ವಸ್ತುಗಳನ್ನು ಸುಲಿಗೆಯಂ ಮಾಡಿ ಬಳಿಕ ॥ ಹರಿಹಯಾದಿ ಸಕಲ ಬಲಗಳಂವೆರಸಿ ನಿಜ । ಪುರಕಾಗಿ ಬರುತಿರ್ಪ ಸಮಯದೋಳಿತ್ತಲೀ । ಅರುಣಪುರದೋಳ್ ತರಳ ಭದ್ರಾಕ್ಷ್ಯ ಮಾತೆಯಡಿಗೆರಗಿ ಕೈಮುಗಿದೆಂದನು ॥ ೧ ॥ ॥ ೨೦೯ ॥

॥ ರಾಗ, ತಾಳ ( ತಾಯೆ ಕೇಳವ್ವ ) ಎಂಬಂತೆ ॥

ಅಮ್ಮ ಲಾಲಿಸು । ಎನ್ನ ಬಿನ್ನಪ । ನಿಮ್ಮ ಪಾದದಿಯೆರಗಿ ಪೇಳುವೆ ॥ ಜನ್ಮರಹಿತನ । ದಯವು ಸರ್ವದ । ನಮ್ಮೊಳಿರುವದ । ರಿಂದಲೀಗ ನಾ ॥ ೧ ॥ ದುಷ್ಟ

ಮೃಗಗಳ ಭೇಟೆಯಾಡಲು । ದಿಟ್ಟತನದಿ ನಾ । ಪೋಪೆ ಕಾಡಿಗೆ ॥ ಸೃಷ್ಟಿಪಾಲರ
ಕುಲದ ಪದ ತಿ । ಸಿಟ್ಟು ಮಾಡದೆ । ಕಳುಹಿಸೆನ್ನನು ॥ ೨ ॥ ಮುನಿಯ ಕರುಣದಿ ।
ಪ್ರೌಢನಾಗಿಹೆ । ಬಣಗುಮೃಗಗಳ । ತಂದು ಬರುವೆನು ॥ ಮನದಿ ಸಂಶಯ ।
ಗೊಳ್ಳಬೇಡವ್ವ । ಕ್ಷಣದಿ ಬರುವೆನು । ಪಾಲಿಸಪ್ಪಣೆ ॥ ೩ ॥ ಸಖಸುನೇತ್ರನ । ಕೂಡಿ
ಪೋಗುವೆ । ಮುಕುರಬಿಂಬ ಕ । ಪೋಲೆ ಲಾಲಿಸು । ಶಕುತಿವಂತನಾ । ಗೆಂದು
ಪರಸು ನೀ । ಸುಖದಿ ಬರುವೆನು । ಸಂಶಯಾವಿಲ್ಲ ॥ ೪ ॥ ॥ ೨೧೩ ॥

॥ ರಾಗ, ಸೌರಾಷ್ಟ್ರ, ಅಷ್ಟತಾಳ ॥

ಬೇಡ ಮಗನೆ ಬಿಡು ಸಾಂ ಪೇಳುವೆನೀಗ । ಮುದ್ದು ಕಂದ । ದೊಡ್ಡ
ಕಾಡಿನೊಳ್ ಮೃಗಭೇಟೆಯಾಡಲು ಸಲ್ಲದು । ಮುದ್ದು ಕಂದ ॥೧॥ ಬಹುಜನರಿದರಿಂದ
ಕಷ್ಟತಪಟ್ಟರು । ಮುದ್ದುಕಂದ । ನಿನ್ನ । ಸಾಹಸ ತೋರಲು ಇದು ಕಾಲ
ವಲ್ಲವೈ । ಮುದ್ದುಕಂದ ॥ ೨ ॥ ಮೃಗಭೇಟೆಯೆಂಬುದು ಸದರವೆಂದರಿಯದಿರ್ ।
ಮುದ್ದುಕಂದ । ಬಹು । ಬಗೆ ಮೃಗಗಳು ಬಾಯ ಬಿಡುತಲೈತರುವವು । ಮುದ್ದು
ಕಂದ ॥ ೩ ॥ ಕ್ರೂರ ಕೈರಾತರು ನೆಲಸಿಕೊಂಡೀರ್ಪರು । ಮುದ್ದುಕಂದ । ನಿಮ್ಮ ।
ಸೂರೆಗೈಯದೆ ಬಿಡರೆಂದಿಗು ಸಾರಿದೆ । ಮುದ್ದುಕಂದ ॥ ೪ ॥ ಗೆಳೆಯ ಸುನೇತ್ರನ
ಕೂಡಿ ಪೋಗಲುಬೇಡ । ಮುದ್ದುಕಂದ । ದುಷ್ಟ । ಖಳರಿಗಾವಾಸವಾಗೀರ್ಪ
ವಿಪಿನವದು । ಮುದ್ದುಕಂದ ॥ ೫ ॥ ಚಿಣ್ಣ ನಿನಗೆ ಛಲ ತರವಲ್ಲ ಪೇಳಿದೆ । ಮುದ್ದು
ಕಂದ । ಈಗ । ಲಿನ್ನ ಮಾತನು ಕೇಳುತಿನಲೀವೆ ನಾನೀಗ । ಮುದ್ದುಕಂದ ॥ ೬ ॥

॥ ಭಾಮಿನಿ ॥

ವನದಿ ಮೃಗಗಳ ಭೇಟೆಯಾಡಲು । ಮನದಿ ನಿಶ್ಚಯಗೈದು ಪೊರಟಿಹೆ
ಜನನಿ ಈ ಪರಿ ತಡೆವುದುಚಿತವೆ ಎನ್ನ ನೀನಿಂದು ॥ ಮುನಿಯ ಕರುಣದ ಕವಚ
ವೆನ್ನಯ । ತನುವ ರಕ್ಷಿಸುತಿರಲು ಭಯವೇ । ನೆನಗೆ ನೇಮವನಿತ್ತು ಕಳುಹಿಸು
ಬೇಗ ನೀನೆಂದ ॥ ೧ ॥ ಹಿಡಿದ ಛಲವನು ಬಿಡದೆ ಪೃರ್ಥಿಪ । ಹುಡುಗನೊಳು ಬಳಿ
ಕೆಂದಳೀಕೆಯು । ಮೃಢನು ಸಲಹಲಿ ನಿನ್ನ ಶೀಘ್ರದಿ ಪೋಗಿ ಬಾರೆಂದು ॥ ಒಡನೆ
ಬೀಳ್ಕೊಡೆ ಮಾತೆಯುಳ ಪದ । ಜಡಜಕಾಂತನಾಗಿ ವೈಶ್ಯರ । ಗಡಣದಧಿಪಗೆ ಪೇಳಿ
ತತ್ಸುತನೊಡನೆ ಪೊರವಂಟಾ ॥ ೨ ॥ ॥ ೨೨೧ ॥

॥ ಕಂದ ॥

ಈ ಪರಿಯಿಂದ ಭದ್ರಾಕ್ಷನು । ಚಾಪವ ಧರಿಸುತ ಭೇಟೆಗೈತರುತೀರ್ಪನಿತ
ರೋಳ್ ॥ ಶ್ರೀಪಾರ್ವತಿಪ್ರಿಯನೆನ್ನುತ । ತಾಪಸವರ ಋಷಭಯೋಗಿ ನಡೆತಂದ
ನಿದಿರೊಳ್ ॥ ೧ ॥ ॥ ೨೨೨ ॥



॥ ರಾಗ, ತೋಡಿ, ಅಷ್ಟತಾಳ ॥

ಮದನವೈರಿಯ ಪದವ ಸ್ಮರಿಸುತ । ಲಿದಿರು ಬಹ ಯೋಗೀಂದ್ರನಂಘ್ರಿಗೆ ।
ಮುದದಿ ವಂದನೆಗೈದು ನುತಿಸಲ್ಕೆ ॥ ಚದುರ ಬಾರೆನ್ನಾನೆ ಬಾರೆಂ । ದಧಿಕ ಕರುಣ
ದೊಳಪ್ಪಿ ಮುದ್ದಿಸಿ । ಮಧುರವಾಕ್ಯದೊಳೆಂದನಾತನೊಳು ॥ ೧ ॥ ಕಂದ ಕೇಳ್
ನಿನ್ನಯ್ಯನನು ಛಲ । ದಿಂದ ಸೋಲಿಸಿ ಕೈಸೆರೆಯ ಪಿಡಿ । ದಿಂದು ಕರದೊಯ್ಯುವನು
ಮಗಧಾಧೀಶ ಹೇಮರಥ ॥ ಸಂದೆಹವ ಗೊಳದೀಗ ಪೋಗಾ । ಮಂದಮತಿಯನು
ಜೈಸಿ ಹವದೊಳು । ಬಂಧನವ ಬಿಡಿಸೈಯ್ಯ ತವ ಪಿತನ ॥ ೨ ॥ ಕೊಡುವೆ ನಾ ನಿನ
ಗೀಗ ಶಂಖವ । ಖಡುಗ ಸಹಿತಲಿ ಕೊಂಡು ಬೇಗದಿ । ನಡೆದು ವೈರಿಯ ಬಲವ
ಸಂಹರಿಸಿ । ಬಿಡಿಸಿ ತಂದೆಯ ಸೆರೆಯ ಗುಟ್ಟನು । ನುಡಿಯದಿರು ನೀನೆಂದು
ನೇಮಿಸಿ । ನಡೆದ ಮುನಿಪನು ತನ್ನ ನಿಜಗತಿಗೆ ॥ ೩ ॥ ॥ ೨೨೫ ॥

॥ ವಾರ್ಧಿಕ ॥

ಇಂತರುಹಿ ಮುನಿಪ ತಾಂ ತೆರಳೆ ಬಾಲಕನು ಲಯ । ಕಂತುಹರನಂದ
ದೋಲ್ ಖಿಡಿ ಸೂಸಿ ಕಂಗಳೊಳ್ । ಪಂಥದಿಂದಾ ಸುನೇತ್ರನು ಸಹಿತ ವಹಿಲದಿಂ
ನಡೆತಂದು ಪೋಪ ಬಲವ ॥ ತಾಂ ತಡೆದು ನಿಲಿಸುತಖಿಳಾಸ್ತ್ರದಿಂ ಸವರುತಿರೆ ।
ತಿಂಥಿಣಿಯ ಸದೆಬಡಿವುತಿರೆ ಕಂಡು ಮಂತ್ರಿ ತಾ । ನಂತಕನ ತೆರದಿ ಘರ್ಜಿಸಿ ತಡೆನು
ನುಡಿದನಾ ಬಾಲಕನೊಳುರೆ ಶೌರ್ಯದಿ ॥ ೧ ॥ ॥ ೨೨೬ ॥

॥ ರಾಗ, ಭೈರವಿ, ಏಕತಾಳ ॥

ಆರೆಲೊ ಕುವರನೆ ನೀನು । ಬಂದು ದಾರಿಯ ತಡೆಯುವದೇನು ॥ ಸಾರಿದೆ
ಬಿಡು ಬಿಡು ದುರುಳ । ಅತ್ತ ಸಾರೆಲೊ ತರಿವೆನು ಕೊರಳ ॥ ೧ ॥ ಧರಣಿಪ ಮಗ
ಧೇಶ್ವರನ । ಪರಿ । ಯರಿಯೆಯ ಘುರಸಾಹಸನ ॥ ಪರಿಕಿಸು ನಾನಾತನಿಗೆ ।
ಮಂತ್ರಿ । ವರನಾಗಿಹೆ ಕೇಳ್ ಶಿಶುವೆ ॥ ೨ ॥ ಹಸುಳೆಯು ನಾನೆಂಬುದನು ।
ನೀನುಸುರುವದೇನದು ನಿಜವು ॥ ಹೊಸಮಸೆ ಕಣೆ ಎಸೆದೀಗ । ನಿನ್ನ । ಅಸುವನು
ತರಿವೆನು ಬೇಗ ॥ ೩ ॥ ಎನೆ ಕೇಳುತ ಮಂತ್ರೀಶ । ನಿಜ । ಧನುವಿನೊಳೆಸೆಯಲು
ಶರವ ॥ ಘನಬೇಗದಿ ತಾ ಕಡಿದು । ಕೂ । ರ್ಗಣೆ ಪಿಡಿದೆಂದನು ಮುಳಿದು ॥ ೪ ॥
ದುರುಳನೆ ಕೇಳೀ ಶರದಿ । ನಿನ್ನ । ಕೊರಳನು ಕಡಿವೆನು ಧುರದಿ । ಪರಿಕಿಸು ನೀನೆಂ
ದೆನುತ । ತೆಗದುರೆ ಕೋಪದಿ ಶರವೆಸೆದ ॥ ೫ ॥ ॥ ೨೩೧ ॥

॥ ಭಾಮಿನಿ ॥

ಹರಶರಣನೆಸೆದಸ್ತ್ರಹತಿಯಲಿ । ತರಹರಿಸಿ ಮೈಮರೆದು ಮೂರ್ಛೆಯೊ ।
ಳಿರದೆ ಧರೆಗೊರಗಲ್ಕೆ ಮಂತ್ರಿಯ ಕಂಡು ಭಟರುಗಳು ॥ ತರತರದ ಕೈದುಗಳ

ಪಿಡಿದಾ । ತರಳನೊಳು ಹೊಯ್ದಾಡಿ ಮಡಿಯಲು । ಧುರಪರಾಕ್ರಮಿ ಹೇಮರಥ ತಾ ತಡೆದು ನುಡಿಸಿದನು ॥ ೧ ॥ ॥ ೨೩೨ ॥

॥ ರಾಗ, ಕೇತಾರಗೌಳ, ಅಷ್ಟತಾಳ ॥

ಎಲವೊ ಬಾಲಕನೆ ನೀ । ಬರಿದ್ಯಾತಕೆಮ್ಮಯ । ಬಲವ ಸಂಹರಿಸಿದೆಯೊ ॥ ಛಲವಿದು ಸಲ್ಲದು ಎನ್ನೊಳು ಸಾರಿದೆ । ಘೇಳಲನೆ ಸಾರತ್ತಲು ॥ ೧ ॥ ಅತುಳ ಸಾಹಸಿ ಮಗಧೇಶನಾಗಿಹೆ ಹೇಮ । ರಥನೆಂದು ಪೇಳುವರು ॥ ಕ್ಷಿತಿಯೊಳಗೆನ್ನಯ ಧುರವತಿ ಕಠಿಣವು । ಪಿತನ್ಯಾರು ಪೆಸರುಸುರು ॥ ೨ ॥ ಆರಾದರೇನು ವಿಚಾರಿಸುವರೆ ಅಧಿ । ಕಾರ ಕೊಟ್ಟವರ್ಯಾರೆಲೊ ॥ ಧೀರತನವು ನಿನ್ನೊಳಿರೆ ಯುದ್ಧವನು ಗೈಯ್ಯೊ । ಸಾರತ್ರಡಲ್ಲದಿರೆ ॥ ೩ ॥ ಶಿಶುಹತ್ಯವನು ಗೈದ ಪಾತಕಕಂಜಿ ನಾ । ನುಸುಂದೆ ನಿನಗಲ್ಲದೆ ॥ ಮಶಕ ನಿನ್ನನು ಹವದೊಳು ಜಯಸುವದಿದು । ತುಸು ಮಾತ್ರ ಎನಗೆಂದನು ॥ ೪ ॥ ಶಿಶುತನದಲಿ ಶೂರ ಪದ್ಮಾದಿ ದೈತ್ಯರ । ಅಸುಗೊಂಡಿಹನು ಗುಹನು ॥ ಶಿಶುವಿನ ಕೈಗುಣ ನೋಡು ನೋಡೆಂದೆನು । ತೆಸೆದನು ಶರಗಳನು ॥ ೫ ॥ ಗರಳಮಡುವಿನೊಳು ಮುಳುಗಿ ಮಕ್ಕಳಕಗಳು । ಧರೆಯೊಳು ಬದುಕಲುಂಟೆ । ಧರಣಿಪ ಹೀರಬಾಹುವ ಯುದ್ಧದೊಳಗೆ ಕೈ । ಸೆರೆ ಪಿಡಿದಿಹೆನು ನೋಡು ॥ ೬ ॥ ಸಾಕು ಮುಚ್ಚೆಲೊ ಬಾಯ ಪನ್ನಿಗಳನು ಎನ್ನೋ । ಛೀ ಕೊಂಡಾಡದಿರೆಲವೊ । ನಾಕೇಶಾದಿಗಳನ್ನು ಬಗೆಯೆನು ಎನ್ನನು ನೀ ಕೆಣಕದಿರು ಪೋಗು ॥ ೭ ॥ ಅಂಥಾ ಪರಾಕ್ರಮವೀರ್ದರೆ ನೀನೀಗ । ನಿಂತು ಕಾದೆಲೊ ಕುವರ ॥ ಅಂತಕನಾಲಯ ಕಟ್ಟುವೆ ನಿನ್ನನು । ಪಂಥವ ನೋಡೆಂದನು ॥ ೮ ॥ ॥ ೨೪೦ ॥

॥ ರಾಗ, ಪಂಚಾಂಗತಿ, ಮಟ್ಟೆ ॥

ಎನಲು ಕೇಳುತ । ಉರಿಯನುಗುಳುತ । ಕಣೆಯ ಮಳೆಯ ಕರೆದ ಬಾಲ । ಫಡಫಡೆನುತ ॥ ೧ ॥ ಬರುವ ಸರಳನು । ತರಿದು ಭೂಪನು । ತರಳನಂಗಕೆಸೆದನಾಗ ಲಖಿಳ ಶರವನು ॥ ೨ ॥ ಅಹಿತನಸ್ತ್ರವ । ಸುಮತಿ ತನುಭವ ! ಸಹಸದಿಂದ ಕತ್ತರಿಸಿ ನುಡಿದ ಶಪಥವ ॥ ೩ ॥ ಹಂದೆ ಲಾಲಿಸು । ಒಂದೆ ಶರದೊಳು । ಇಂದು ನಿನ್ನ ಜೈಸ ದೀರ್ದಡೆನಗೆ ಧರೆಯೊಳು ॥ ೪ ॥ ನಾರಿಹತ್ಯವ । ಗೈದ ಪಾಪಿಯು । ಘೋರ ದುರಿತ ಬರಲೆನುತ್ತಲೆಸೆದ ಬಾಣವ ॥ ೫ ॥ ಖಿಡಿಯನುಗುಳುತ । ಬರುವ ಶರವ ತಾ । ಕಡಿಯುದಾಗ ಭಯದೊಳೋಡೆ ಜಾಂಬುನದ ರಥ ॥ ೬ ॥ ॥ ೨೪೬ ॥

॥ ವಾರ್ಧಿಕ ॥

ತರಳನಸ್ತ್ರದ ಹತಿಯ ಸೈರಿಸದೆ ಹೇಮರಥ । ಧುರದೊಳಪಜಯವಾಂತು ಬೆಂಗೊಟ್ಟು ಓಡುತಿರೆ । ಪರಿಕಿಸುತಲುಳಿದ ಬಲ ಜೀವಾಭಿಲಾಷೆಯಿಂ ಚದರಿ



ನಾಲ್ದೆಸೆಗೋಡಲು ॥ ಕರುಣದಿಂದವರ ಬೆನ್ನಟ್ಟಿ ಕೊಲ್ಲದೆ ತರಳ । ಧರಣೀಶ ಪವಿಭುಜನ ಬಳಿಗೆ ನಡೆತಂದು ತಾ । ನಿರದವನ ಬಂಧನವ ಬಿಡಿಸೆ ಕಂಡಾಕ್ಷಣದೊಳರಸನವನೊಡನೆಂದನು ॥ ೧ ॥ ॥ ೨೪೭ ॥

॥ ರಾಗ, ಕಾಂಬೋಧಿ, ಝಂಪೆ ॥

ಆರು ನೀನೆಲೊ ಸುಕು । ಮಾರ ಗಂಭೀರ । ಊರಾವುದೆನ್ನೊಳುಸುರೈಯ್ಯ ರಣಧೀರ । ಭೂರಿ ಪುಣ್ಯಾತುಮರು ನಿನ್ನ ಪಿತಮಾತೆಯರು । ಚಾರುರೂಪದಲಿ ಸ್ಮರಸನ್ನಿಭಾಕಾರ ॥ ೧ ॥ ತಂದೆತಾಯ್ಗಳ ಪೆಸರ ಪೇಳು ನೀ ಬೇಗ । ಬಂದುದೆಲ್ಲಿಂದ ಪೋಗುವದೆಲ್ಲಿಗೀಗ ॥ ಇಂದೆನ್ನ ಪೂರ್ವಜನ್ಮದ ಪುಣ್ಯದಿಂದ ನೀ । ಬಂದು ಬಿಡಿಸಿದೆ ಸೆರೆಯ ಪೇಳಲೇನಯ್ಯ ॥ ೨ ॥ ಪಾಪಿಯಾಗಿಹ ಹೇಮರಥನೆನ್ನ ಧುರದಿ । ತಾ ಪಿಡಿದು ಸೆರೆಯ ಕೊಂಡೊಯ್ವ ಸಮಯದಲಿ ॥ ನೀ ಪರಾಕ್ರಮದಿಂದಲೈತಂದು ಬಿಡಿಸಿ ಸ । ರ್ವೋಪಕಾರವಗೈದೆ ನಿನಗೆಣೆಯ ಕಾಣೆ ॥ ೩ ॥ ಕೇಳ್ವೆಯ್ಯ ಧರಣೀಶ ನಾನೆಂಬ ನುಡಿಯ । ಬಾಲಭಾಷಿತವೆಂದು ಪೇಳದಿರು ರಾಯ ॥ ಪೇಳಲಾರೆನು ಎನ್ನ ಪೂರ್ವ ವೃತ್ತಾಂತವನು । ಕಾಲಕಂದರನಾಣೆ ಪುಶಿಯಲ್ಲವೈಯ್ಯ ॥ ೪ ॥ ತೆರಳು ನೀನೀಗ ನಿನ್ನಯ ಪುರಕೆ ಬೇಗ । ಪರಮ ಸಂತೋಷದಲಿ ಸಕಲ ಜನ ಸಹಿತ ॥ ಧರಣಿಯನು ಪಾಲಿಸುತ ಹರುಷದೊಳಗಿರು ನೀನು । ಬರುವೆ ನಾ ಕೆಲವು ದಿನದೊಳಗೆ ನಿನ್ನೆಡೆಗೆ ॥ ೫ ॥ ॥ ೨೫೨ ॥

॥ ಭಾಮಿನಿ ॥

ಧರಣಿಪನ ಮಧುರೋಕ್ತಿಯಿಂದಲಿ । ತರಳ ಕಳುಹಿಸಿ ಪುರಕೆ ತನ್ನಯ । ಪರಮ ಸಖನಾಗಿಹ ಸುನೇತ್ರನ ಕೂಡಿ ಹರುಷದಲಿ ॥ ಭರದಿ ಬಂದಾ ಮಾತೆಯಂಘ್ರಿಗೆ । ಶಿರವ ಚಾಚುತಲಾಗ ವನದೊಳ । ಗಿರದೆ ನಡೆದೀ ಪರಿಯ ಬಿನ್ನೈಸಿದನು ತಾ ಮುದದಿ ॥ ೧ ॥ ॥ ೨೫೩ ॥

॥ ರಾಗ, ಆದಿತಾಳ, ( ಆದರಾಲಿಸು ಮತ್ಸ್ಯಜನೆ ) ಎಂಬಂತೆ ॥

ತಾಯೆ ಲಾಲಿಸಿ ಕೇಳು ಎನ್ನ ಬಿನ್ನಪವ । ಮಾಯಮಾತುಗಳಲ್ಲ ಸಹಜ ಕೇಳವ್ವ ॥ ಕಾಯಜಾರಿಯ ಕೃಪೆಯಿಂದ ಸೌಭಾಗ್ಯ । ಕಾಯುವಂದವ ಗೈದ ನಿನ್ನೋಲಿ ಭಾಗ್ಯ ॥ ೧ ॥ ನಿನ್ನನುಜ್ಞೆಯ ಪಡೆದೀ ಸುನೇತ್ರನನು । ತನ್ನೊಡಗೊಂಡು ಬೇಟೆಗೆ ಪೋಗಲ್ನಾನು ॥ ಮುನ್ನ ಎನಗೆ ಜೀವದಾನವಿತ್ತಿರುವ । ಸನ್ನುತ ಯೋಗಿವರ್ಯನು ಬಂದನವ್ವ ॥ ೨ ॥ ಬಂದು ಮಾರ್ಗದಿ ಪೇಳ್ದನೆನ್ನೊಳಗವನು । ಕಂದ ನಿನ್ನಯ ತಂದೆಯನು ಹೇಮರಥನು । ಬಂಧಿಸಿ ಯುದ್ಧದಿ ಕೈಸರೆ ಪಿಡಿದು । ಕುಂದದೊಯ್ಯುವ ನಿಜಪುರಿಗೆ ತಾನೊಲಿದು ॥ ೩ ॥ ತೆರಳೀಗ ಬೇಗದಿ ವೈರಿಯ ಜೈಸಿ । ಬರುವದೀಗಲು ಎಂದು ಎನ್ನನು ಪರಸಿ ॥ ವರಶಂಖ ಖಡ್ಗವನಿತ್ತನು ತಪಸಿ । ಇರದೆ ತಾನಡರಿದ ನಭವನುಪಕರಿಸಿ ॥ ೪ ॥ ಒಡನೆ ಶೀಘ್ರದಿ ನಾನು ಪೋಗಿ ಮಾರ್ಗ

ದೊಳು ॥ ತಡೆದು ನಿಲ್ಲಿಸಿ ಯುದ್ಧಗೈದೆ ವೈರಿಯೊಳು ॥ ಕಡುಬಲವೆಲ್ಲ ಸಂಹರಿಸಿ ಸೋಲಿಸುತ । ಬಿಡಿಸಿದೆ ಪಿತನ ಸೆರೆಯು ಕೇಳು ಮಾತ ॥ ೫ ॥ ಬಳಿಕೆನ್ನ ಕುರುಹ ಪೇಳದೆ ಪಿತನನ್ನು । ಕಳುಹಿದೆ ಪುರಕೆ ಸುಕ್ಷೇಮದಿ ತಾನು ॥ ಗೆಲವಿನಿಂದೈತಂದೆ ನಿನ್ನೆಡೆಗಾಗಿ । ಅಳಲದಿರಿನ್ನು ಲೇಸಹುದು ನಿಜವಾಗಿ ॥ ೬ ॥ ॥ ೨೫ ॥

॥ ಭಾಮಿನಿ ॥

ತನಯನಾಡಿದ ನುಡಿಯ ಕೇಳುತ । ವನಜಲೋಚನೆ ಸುಮತಿ ಹರುಷದ । ವನಧಿಯೊಳಗೋಲಾಡಿ ತೆಗೆದಪ್ಪುತ ಕುಮಾರಕನ ॥ ವಿನಯದಿಂ ಮುದ್ದಿಸುತ ವೈಶ್ಯನ । ಮನೆಯೊಳತಿ ಸುಖದಿಂದಲೀರ್ದರು । ಮುನಿಗಳಿರ ನೀವ್ ಕೇಳಿರೆಂದನು ಸೂತಮುನಿಯಾಗ ॥ ೧ ॥ ॥ ೨೬೦ ॥

॥ ಅಂತು ಸಂಧಿ ೧ಕ್ಕೆ ಪದ ೨೬ಂಕ್ಕೆ ಮಂಗಲ ಶ್ರೀ ॥

## ॥ ದ್ವಿತೀಯ ಸಂಧಿ ಪ್ರಾರಂಭಃ ॥

॥ ಶ್ರೀ ಜಗದಾಂಬಾಯ ನಮಃ ॥

॥ ವಾರ್ಧಿಕ ॥

ಕೇಳಿರೈ ಮುನಿಗಳಿರ ಮುಂಗಥೆಯನುಸುರ್ವೆ ಭೂ । ಪಾಲ ಚಂದ್ರಾಂಗದನು ನಿಷಧಾವನಿಯನು ತಾ । ಪಾಲಿಸುತ ತನ್ನ ಮುತ್ತಾತ ನಳನಂತೆ ಸುವಿಶಾಲಮತಿ ಯಾಗಿ ಬಳಿಕ ॥ ಶೀಲ ಸಂಪನ್ನೆಯಾದಾರ್ಯವರ್ತವನಿಪನ । ಬಾಲೆ ಸೀಮಂತಿನಿಯ ವಲಿಸುತವಳೊಳು ಕೀರ್ತಿ । ಮಾಲಿನೀಯೆಂಬ ಸುಕುಮಾರಿಯಂ ಪಡೆದತುಳ ವೈಭವದೊಳಿರುತೀರ್ದನು ॥ ೧ ॥ ॥ ೧ ॥

॥ ರಾಗ, ಸೌರಾಷ್ಟ್ರ, ತ್ರಿವುಡೆತಾಳ ॥

ಒಂದು ದಿನ ರಾಜಾಸನವನೇ । ರ್ದಂದು ಮಂತ್ರಿಯೊಳೆಂದ ತನ್ನಯ । ನಂದನೆಗೆ ವೈವಾಹಕಾಲವು । ಬಂದಿತಲ್ಲಾ ॥ ೧ ॥ ಪ್ರಾಯಮುದದಿಂದಿರುವ ಕುವರಿಗೆ । ಕಾಯಜನು ಬಹು ಪರಿಯೊಳ್ಕಷ್ಟವ । ನೀಯುವನು ಯೋಚಿಸಲು ಬಹಳ । ನ್ಯಾಯವ್ಮಾತು ॥ ೨ ॥ ರೂಪುಸೌಂದರ್ಯದೊಳಗಿಕ್ಕ್ಪ । ಚಾಪನರಸಿಯ ತೆರದಿ ತೋರ್ಪಳು । ಚಾಪಲಾಕ್ಷಿಗೆ ಸರಿಯ ವರನನು । ಭೂಪರೊಳಗೆ ॥ ೩ ॥ ಕಾಣೆ

 A 4032

ನೆಲ್ಲಿಯು ಸಚಿವನಿದಕಿ । ನ್ನೇನ ಮಾಡಲಿಯೆನುತ ಪೇಳ್ವಿರ । ಲಾ ನೃಪಾಲನ ಬಳಿಗೆ ಕುವರಿಯು । ತಾನು ಮುದದಿ ॥ ೪ ॥ ಬಂದು ಸಖಿಯರ ವೃಂದದಿಂದಲಿ । ತಂದೆ ಯಡಿದಾವರೆಗೆ ಭಕ್ತಿಗ । ಳಿಂದ ವಂದಿಸಿ ನಿಂದಿರಲ್ಕಾ । ನಂದದಿಂದಾ ॥ ೫ ॥ ॥ ೬ ॥

॥ ರಾಗ, ಕೇತಾರಗೌಳ, ಅಷ್ಟತಾಳ ॥

ಪೊಡವಿಪ ತನ್ನಯ । ವಡಲಜೆಯನು ಪಿಡಿ । ದೊಡನೆತ್ತಿ ಸಂತೋಷದಿ ॥ ತೊಡೆಯನೇರಿಸಿ ಮುದ್ದ । ನಿಡುತ ಪೇಳಿದ ಬಾಲೆ । ನುಡಿ ಬಂದುದನು ಮನದಿ ॥ ೧ ॥ ಮಂದಗಮನೆ ಪಿತ । ಗೆಂದಳು ಕೇಳ್ಳೈಯ್ಯ । ತಂದೆ ನಿನ್ನನು ನೋಡಲು ॥ ಬಂದೆನಲ್ಲದೆ ಬೇರೆ । ಕಾರ್ಯವಿಲ್ಲೆನೆ ಸಖಿ । ಯೆಂದಳೋರ್ವಳು ಭೂಪಗೆ ॥ ೨ ॥ ಭೂತಳಾಧಿಪ ರತಿ । ನಾಥನಟ್ಟುಳಿಯಿಂದ । ಸೋತು ನಿನ್ನಯ ಮಗಳು ॥ ಪ್ರೀತನ ಮಾಡೆನ । ಲೋತು ನಾಚುವಳೆನ । ಲಾ ತಳೋದರಿಗೆಂದನು ॥ ೪ ॥ ತರಳೆ ಕೇಳ್ ದೇಶಕ್ಕೆ । ಚರರನಟ್ಟುತಲೀಗ । ಬರಿಸುವೆ ಸುಕುಮಾರರ ॥ ಸರಿಯಾದ ವರ ನೋಡಿ । ವರಿಸುವದೆನೆ ಕೇಳಿ । ಹರುಷದಿ ಪಿತನಡಿಗೆ ॥ ೫ ॥ ವಂದಿಸಿ ಸಖಿಯರ । ವೃಂದ ಸಹಿತಲಾಗ । ಳಿಂದು ಮುಖಿಯು ತೆರಳೆ ॥ ಚಂದ್ರಾಂಗದನು ನಿಜ । ಮಂತ್ರಿ ಕುಶಲಮತಿ । ಗೆಂದನು ವಿನಯದಲಿ ॥ ೬ ॥ ॥ ೧೨ ॥

॥ ರಾಗ, ಸೌರಾಷ್ಟ್ರ, ಅಷ್ಟತಾಳ ॥

ಬರೆಸು ಲೇಖನವನ್ನು ತಡವ ಮಾಡದಿರೀಗ । ಮಂತ್ರಿ ಕೇಳು । ಉಡು । ಗರೆ ಸಹಿತೀಗಲು ಕಳುಹಿಸು ಚಾರರ । ಮಂತ್ರಿ ಕೇಳು ॥ ೧ ॥ ತರಳೆಗೆ ಸ್ವಯಂವರ ವೆಸಗಬೇಕೀಗಲು । ಮಂತ್ರಿ ಕೇಳು । ವರ । ಧರಣಿಪಾಲಕರನ್ನು ಕರಸೈಯ್ಯ ಬೇಗದಿ । ಮಂತ್ರಿ ಕೇಳು ॥ ೨ ॥ ಬರುವ ವೈಶಾಖದ ಶುದ್ಧಪಂಚಮಿಯೊಳು । ಮಂತ್ರಿ ಕೇಳು । ಮದ । ಕರಿಯಾನೆ ಕುವರಿಗೆ । ವೈವಾಹವೆನುತಲಿ । ಮಂತ್ರಿ ಕೇಳು ॥ ೩ ॥ ವರಿಸುವಳ್ ಮನಬಂದ ಪುರುಷರನೆಂಬುದ । ಮಂತ್ರಿ ಕೇಳು । ನೀ । ಬರೆಸಿ ಪತ್ರಿಕೆಗಳ ಕಳುಹಿಸು ಬೇಗದಿ । ಮಂತ್ರಿ ಕೇಳು ॥ ೪ ॥ ಗುಡಿಬಿಡಾರ ಗಳನ್ನು ವಿರಚಿಸು ನೃಪರಿಗೆ । ಮಂತ್ರಿ ಕೇಳು । ಬೇಗ । ಪೊಡವಿಯಮರರನ್ನು ಕರೆಸಬೇಕೀಗಲು । ಮಂತ್ರಿ ಕೇಳು ॥ ೫ ॥ ತಡವ ಮಾಡದಿರೈಯ್ಯ ಪುರವ ಸಿಂಗರಿ ಸೀಗ । ಮಂತ್ರಿ ಕೇಳು । ಬೇಗ । ಉಡುಗರೆ ಉಚಿತವ ಕೊಡಿಸು ನಮ್ಮವರಿಗೆ । ಮಂತ್ರಿ ಕೇಳು ॥ ೬ ॥ NR N22 ॥ ೧೮ ॥

॥ ಭಾಮಿನಿ ॥

ಈ ತೆರದಿ ಮಂತ್ರೀಶಗಾ ಭೂ । ನಾಥ ನೇಮಿಸಲಾಗ ಸಚಿವನು । ಭೂತ ಳಾಧಿಪನೆಂದ ರೀತಿಯೊಳನುಕರಿಸಿ ಪುರವ ॥ ಖ್ಯಾತನೃಪರಿಗೆ ಬರೆಸಿ ಲಿಖಿತವ । ಪ್ರೀತಿಯಿಂ ಕಳುಹಿಸಲು ಚಾರಕ । ರಾ ತತಕ್ಷಣ ತೆರಳಿ ದ್ರಾವಿಡ ಪಾಂಡ್ಯಭೂಪರಿಗೆ ॥

ತೋರಿ ಪತ್ರಿಕೆಯನ್ನು ಬಳಿಕಾ । ಶೂರ ಸೌರಾಷ್ಟ್ರಾವನೀಶ ಮ । ಯೂರಸೇನಂ ಗರುಹಿ ಬಳಿಕಲವಂತಿನೃಪನಾದ ॥ ವೀರಭುಜನಿಂಗಿತ್ತ ವ್ರೋಲೆಯ । ಸಾರಿಯಲ್ಲಿಂ ದಾಗ ಬಂದಾ । ಚಾರು ಮಗಧಾಧಿಪನ ಚರಣಕೆ ಎರಗಿ ಪೇಳಿದರು ॥ ೨॥ ॥ ೨೦ ॥

॥ ರಾಗ, ತೋರವಿ, ಏಕತಾಳ ॥

ಲಾಲಿಸಿ ಕೇಳು ಭೂಪ । ಗುಣ ಸುಪ್ರತಾಪ । ಲಾಲಿಸಿ ಕೇಳು ಭೂಪ ॥ ॥ ಪಲ್ಲ ॥ ನಿಷಧಪುರದಧಿಪ । ಕುಶಲದಿ ಪೇಳ್ವನಪ್ಪ । ಶಶಿಮುಖಿ ಸುತೆಯನೀಗ । ವರಿಸಲು ಬೇಗ ॥ ೧ ॥ ಬರಬೇಕೆಂದೆನುತ ಪತ್ರ । ಬರೆಸಿ ಕಳುಹಿದನಿತ್ತ । ಭರದಿಂದ ಲೆಮ್ಮ ರಾಯ । ಲಾಲಿಸು ಜೀಯ ॥ ೨ ॥ ॥ ೨೨ ॥

॥ ರಾಗ, ಭೈರವಿ, ಝಂಪೆ ॥

ಎಂದು ಚರರಿತ್ತ ಲಿಖಿತ । ಹೇಮರಥ । ನಂದು ತಾ ನೋಡಿ ಮತ್ತಾ ॥ ಮುಂದ ಹಾಸದೊಳೆಂದನು । ಮಂತ್ರಿಯೊಡ । ನಂದು ಮುದವಾಂತು ತಾನು ॥ ೧ ॥ ಮಂತ್ರಿ ವರ್ಯನೆ ಲಾಲಿಸು । ಪತ್ರಿಕೆಯ । ಸಂತಸದಿ ನೀ ವಾಚಿಸು ॥ ಇಂತೆಂದ ನುಡಿಯ ಕೇಳಿ । ಸಚಿವ ತಾ । ನಿಂತು ವಾಚಿಸಿದ ನೋಡಿ ॥ ೨ ॥ ॥ ೨೪ ॥

॥ ರಾಗ, ಕಾಂಬೋಧಿ, ಝಂಪೆ ॥

ಮಿತ್ರವಂಶಾಂಬುನಿಧಿ । ಕುಮುದಬಾಂಧವನು ಸ । ನ್ಮಿತ್ರನಾಗಿಹ ಹೇಮ ರಥಗೆ । ಅರ್ತಿಯಿಂದಲಿ ನಿಷಧಪುರದಾಧಿಪತಿ ಕುಮುದ । ಮಿತ್ರಾಂಗದನು ಬರೆದ ಲಿಖಿತ ॥ ೧ ॥ ಈ ವರೆಗೆ ನಾವು ಶ್ರೀ ಭಾವಜಾರಿಯ ದಯದಿ । ಭೂವಳಯದೊಳಗೆ ಕ್ಷೇಮಿಗಳು ॥ ಭೂವರೇಣ್ಯನೆ ನಿನ್ನ ರಾಷ್ಟ್ರದೊಳು ಸಕಲ ಜನ । ರ್‍ಯಾವ ವಿಧವಾಗಿ ಹರು ಬರೆಸು ॥ ೨ ॥ ಧರಣಿಪತಿ ಕೇಳೆನ್ನ ತರಳೆ ಕಮಲಾಂಬಕಿಗೆ । ವಿರಚಿಸುವೆನು ಸ್ವಯಂವರವ ॥ ಬರುವ ವೈಶಾಖ ಸಿತಪಕ್ಷ ಪಂಚಮಿದಿನಕೆ । ಬರುವದೈ ಮಿತ್ರ ರೊಡಗೂಡಿ ॥ ೩ ॥ ಎಂಬ ಲಿಖಿತಾರ್ಥವನು ಮಂತ್ರಿವಾಚಿಸಿ ಪೇಳೆ । ಕುಂಭಿನೀ ಪತಿ ಹೇಮರಥನು ॥ ಅಂಬರಾದ್ಯುಡುಗರೆಗಳಿತ್ತು ಕಳುಹಿಸಿ ಚರರ । ಸಂಭ್ರಮ ದೊಳೆಂದ ಮಂತ್ರಿಯೊಳು ॥ ೪ ॥ ಕೇಳೈಯ್ಯ ಮಂತ್ರಿ ನಾವ್ । ತೆರಳಬೇಕೀಗ ಜನ । ಪಾಲ ಚಂದ್ರಾಂಗದನ ಪುರಿಗೆ ॥ ಬಾಲಕಿಯ ವರಿಸಿ ಲಗ್ನವನೆಸಗಿಕೊಳ ಬೇಕು । ಮೂಲಬಲ ಸಹಿತಲಿಂದೀಗ ॥ ೫ ॥ ಪೊರಡಲೆಂದೆನುತಾಗಲಖಿಳ ವೈಭವ ದಿಂದ । ಧರಣಿಪತಿಯೇರಿ ಸ್ಯಂಧನವ । ಪರಮ ಹರುಷದಿ ಮಂತ್ರಿ ಮೊದಲಾದವರ ಕೂಡಿ । ಪೊರಟ ಸ್ತುತಿಪಾಠಕರವೆರಸಿ ॥ ೬ ॥ ॥ ೩೦ ॥

॥ ಭಾಮಿನಿ ॥

ಧರಣಿಪತಿ ಹೇಮಾಖ್ಯ ನಿಜಬಲ । ವೆರಸಿ ಬರುತಿರಲಿತ್ತ ದ್ರಾವಿಡ । ದರಸ ಮೊದಲಾದವರು ತಮ್ಮಯ ಬಿರುದಿನಿಂದೈದೆ ॥ ಪೊರಟು ನಿಷಧಾಪುರಕೆ ಬರುತಿರೆ ।



ಕರಿಗಮನೆ ವರ ಕೀರ್ತಿಮಾಲಿನಿ । ತರುಣಿಯರ ಗಡಣದಲಿ ಪೊರಟೈತಂದಳುಪ ವನಕೆ ॥ ೧ ॥ ॥ ೩೧ ॥

॥ ರಾಗ, ತ್ರಿವುಡೆ ( ಸತಿ ಶಿರೋಮಣಿ ) ಎಂಬಂತೆ ॥

ಬಾಲೆ ಪುಮಾಲೆ ಸುವಿಶಾಲೆಯು ಮುದದಿ । ಬಾಲಕಿಯರ ಸನ್ಮೇಳವೈಭವದಿ । ನೀಲಾಳಕಿಯು ಸುಕಪೋಲ ಪೊಳೆಯುತಲಿ । ಕಾಳಾಹಿಯಂದದಿ ಜಡೆ ಶೋಭಿಸು ತಲಿ ॥ ಲೋಲನಯನೆಯು ಧರಿಸಿ ಕಸ್ತುರಿ । ತಿಲಕವನು ನಿರಿದುಡಿಗೆ ಶೋಭಿಸಿ । ಬಾಳೆಸುಳಿಯಂದದಲಿ ಬಳಕುತ । ರಾಕಶಶಿಮುಖಿ ಅತಿ ಹರುಷದಲಿ । ಸರಸಿರುಹ ಲೋಚನೆಯು ಬಂದಳು । ತಾನುಪವನಕೆ ॥ ೧ ॥ ಫುಲ್ಲಲೋಚನೆ ನಡೆ ನೋಡಿ ಮರಾಳ । ವಲ್ಲಿ ನಾಚುತಲಿರೆ ನುಡಿ ಕೇಳಿ ಶುಕವು । ಮೆಲ್ಲನಾಶ್ರಯಿಸಲು ಮೌನ ವನಾಗ । ಚಲ್ವೆಯ ಸ್ತನಕೆ ಸೋತವು ಚಕ್ರವಾಕ ॥ ಮೆಲ್ಲಮೆಲ್ಲನೆ ನಡೆದು ಬರು ತಿರ । ಅಲ್ಲಿ ನೋಡಿದ ವಿಟರ ಮನ ತಾ । ತಲ್ಲಣಿಸಿ ವಿರಹಾತುರದಿ ನಿಜ । ಗಲ್ಲ ದೊಳು ಕರವಿಟ್ಟು ನೋಡ್ತಿರೆ । ಮಲ್ಲಿಗೆಗಂಧಿನಿಯು ಬಂದಳು । ತಾನೊಲಿದು ಬೇಗ ॥ ೨ ॥ ॥ ೩೩ ॥

॥ ವಾರ್ಧಿಕ ॥

ತರತರದ ವೃಕ್ಷಸಂತತಿಗಳಿಂ ಲತೆಗಳಿಂ । ಪರಿಪರಿಯ ಚೂತದಾಳಿಂಬದಿಂ ರಂಭದಿಂ । ಪರಿಮಳಿಪ ವರ ಸುಮಾವಳಿಗಳಿಂ ಅಳಿಗಳಿಂ ಸವಿಪ ಶುಕಪಿಕಗಳಿಂದ ॥ ಚರಿಸಿ ನಲಿದಾಡುತಿಹ ಮೃಗಗಳಿಂ ಹರಿಗಳಿಂ । ಸರಸಿಯೊಳ್ ಪೊಳೆವ ಅರ ವಿಂದದಿಂ ಚಂದದಿಂ । ಮೆರೆವ ಗೋಪುರದ ಹರ್ಮ್ಯಾಳಿಯಿಂ ಲೀಲೆಯಿಂ ಶೋಭಿಸಿ ದುದಾರಾಮವು ॥ ೧ ॥ ॥ ೩೪ ॥

॥ ರಾಗ, ಸಾವೇರಿ, ಅಷ್ಟತಾಳ ॥

ಇಂತಾನಂದದೊಳಿರುವ । ಆರಾಮದಿ । ದಂತಿಗಾಮಿನಿ ಮುದವ ॥ ನಾಂತು ತಾ ಸಖಿಯರ ಕೂಡಿ ಸಂಚರಿಸುತ್ತ । ಸಂತೋಷದೊಳಗೆಂದಳು । ಸಖಿಯರೊಳು ॥ ೧ ॥ ಹರಿಣನೇತ್ರೆಯರೆ ನೋಡಿ । ಮಾಮರನೊಳು । ಮೆರೆವ ಲತೆಗಳು ಕೂಡಿ ॥ ಪರಿ ಶೋಭಿಸುತ್ತಿಹ । ಪರಿಯ ನೋಡಲು ಸತಿ । ವರನನಪ್ಪಿದ ತೆರದಿ । ತೋರ್‍ಪುದು ಕೆಳದಿ ॥ ೨ ॥ ಬಳಿಕೋರ್ವಳೆಂದಳ್ ತಾಯೆ । ನಿನಗೆ ತಕ್ಕ । ಚಲುವ ರಮಣ ನೀರ್ದರೆ ॥ ಘಳಿಲನೆ ಬಿಗಿದಪ್ಪಿ । ಸ್ಮರಕೇಳಿಯೊಳು ಮನ । ವಲಿಸಿ ನಲಿವುತ್ತಲೀರ್ದ । ನೀನಿರದೆ ॥ ೩ ॥ ಮತ್ತೋರ್ವಳಿಂತೆಂದಳು । ನಮ್ಮಾಳಿಯು । ಉತ್ತಮ ಪುರುಷ ನೊಳು ॥ ಸ್ವಸ್ತದಿ ಕೂಡುತ ಹರುಷದ ಸೊಬಗಿನಿಂ । ಚಿತ್ತದಿ ಮರೆವಳಮ್ಮ । ನಾಳೆಗಮ್ಮ ॥ ೪ ॥ ಕೇಳಿ ಕೋಪಿಸಿ ಭೂಪನ । ತರಳೆ ಕೀರ್ತಿ । ಮಾಲಿನಿ ಪೇಳ್ದ ಳಿನ್ನ ॥ ಖೂಳತನದ ಮಾತು ತರವಲ್ಲ ಎನ್ನೊಳು । ಪೇಳದಿರ್ ಶಿಕ್ಷೆಯನು । ಗೈಯ್ಯುವೆನು ॥ ೫ ॥ ॥ ೩೯ ॥

॥ ಭಾಮಿನಿ ॥

ತರುಣಿಯರು ತಾವ್ ತವ್ಮೊಳೀ ಪರಿ । ಸರಸ ಸವಿನುಡಿಯಿಂದ ವನದೊಳ । ಗಿರಲಿಕಿತ್ತಲು ವೀರಮಗಧಾಧಿಪತಿ ಹೇಮರಥ॥ ಭರದಿ ಬಂದಾ ಪುರದ ಬಾಹ್ಯೆಯೊ । ಳಿರದೆ ಬೀಡಿಕೆ ಬಿಡಿಸಿ ಶ್ರಮ ಪರಿ । ಹರಿಸೆ ಬಂದುಪವನದಿ ಕಂಡನು ತರುಣಿಯರ ಪರಿಯು ॥ ೧ ॥ ॥ ೪೦ ॥

॥ ವಾರ್ಧಿಕ ॥

ಆಕಾಶದೊಳಗಿರುವ ತಾರೆಗಳ ಮಧ್ಯದೊಳು । ರಾಕೇಂದುವಿನ ತೆರದಿ ಶೋಭಿಸುವ ತನ್ನ ನಿಜ । ದಾಕಾರ ಪ್ರಭೆಯಿಂದಲಾ ಸ್ಥಳವ ಬೆಳಗುತ್ತ ಕದಪು ಕನ್ನಡಿಯ ಪೋಲ್ವ ॥ ಕೋಕನದ ಮೊಗ್ಗೆಯಂತೆಸೆವೆರಡು ಸ್ತನದಿಂದ । ಕೋಕಿಲಾ ಸ್ವರದಿಂದ ನುಡಿ ಗಿಣಿಯ ತೆರದಿಂದ । ಭೇಕಾರಿವೇಣಿ ನಡುಬಳುಕುತೊಯ್ಯನೆ ನಡೆವ ಪರಿಯ ಕಂಡವನೆಂದನು ॥ ೧ ॥ ॥ ೪೧ ॥

॥ ರಾಗ, ಯಮುನಾಕಲ್ಯಾಣಿ, ಅಷ್ಟತಾಳ ॥

ಅಹಹ ಏನ್ ಚಲುವೆ ತಾನಾಗಿ ರಂಜಿಪಳು । ಅಹಿಪತಿಗಿವಳ ಬಣ್ಣಿಸಲಸದಳವು ॥ ಮಹಿಯೊಳಗೆಲ್ಲ್ಯಾ ನಾ ಕಾಣೆನೀ ಸೊಬಗ । ಅಹಿವೇಣಿ ರಂಜಿಸಿ ತೋರ್ಪಳು ಬೆಡಗ ॥ ೧ ॥ ರತಿಯು ಸೌಂದರ್ಯವ ಕೇಳಿ ನಾ ಬಲ್ಲೆ । ಸುರ । ಸತಿಯರ ಸೊಬಗನು ನೋಡಿ ನಾ ಬಲ್ಲೆ ॥ ಕ್ಷಿತಿಯೊಳಗಿವಳ್ತನುಲತೆ ಚಲುವಿಕೆಗೆ । ಪ್ರತಿ ಕಾಣೆ ಧಿಟವಾಗಿ ಅಮಮ ಈ ಬಗೆಗೆ ॥ ೨ ॥ ಮೃಗಹೀನ ಚಂದ್ರಮ ಬಿಂಬವೀ ಮುಖವು । ಯುಗಕುಚಾಮೃತ ಹೇಮಕುಂಭವು ನಿಜವು ॥ ಮಿಗೆ ಮದನಾಸ್ತ್ರದ ಜಾಲವಳಕವು । ನಿಗಳವು ಪುರುಷರ್ಗೆ ದೃಗುಯುಗಳವು ॥ ೩ ॥ ಅರವಿಂದಮುಖಿ ಚಲ್ವ ಕದಪು ಕನ್ನಡಿಯು । ತೆರದಿಂದ ಪೊಳೆವುದು ಹರಿಣಾಕ್ಷಿ ನಡೆಯು ॥ ಕರಿಯ ಸೋಲಿಸುವದು ಭ್ರೂಲತೆ ಬಗೆಯ । ಪರಿಯ ನೋಡಲು ಮನ ತಾಳ್ದುದು ವ್ಯಥೆಯ ॥ ೪ ॥ ॥ ೪೫ ॥

॥ ಭಾಮಿನಿ ॥

ನಾಗವೇಣಿಯನೊಲಿಸಿ ಮದುವೇ । ಯಾಗಿ ಸಂಭ್ರಮದಿಂದಲಿವಳನು । ಭೋಗಿಸಿದರೀ ಧರೆಯೊಳಗೆ ಸರಿ ಕಾಣೆನೆನಗಿನ್ನು ॥ ಹೇಗೆ ಗೈಯಲಿ ಎನುತ ಬಂದಾ । ನಾಗಗಮನೆಯ ಮುಂದೆ ನಿಂದೊಲಿ । ದಾಗ ನುಡಿಸಿದನವನು ನಯನುಡಿಯಿಂದ ಬಾಲಕಿಯ ॥ ೧ ॥ ॥ ೪೬ ॥

॥ ರಾಗ, ಝುಂಪೆತಾಳ, (ಬಾರೆ ಬಾ ಬಾ ಮಣಿಯೆ) ಎಂಬಂತೆ ॥

ನೀರೆ ಮೋಹನಕಾರೆ । ವಾರಿಜಾಕ್ಷಿ ಚದುರೆ ॥ ಮಾರನರ್ಧಾಂಗಿ ನೀ । ಬಾರೆ ಫಣಿವೇಣಿ ॥ ೧ ॥ ಕನ್ನೆ ಮೋಹದ ಕಣಿಯೆ । ರನ್ನೆ ರತಿ ನಿನಗೆಣೆಯೆ ॥ ಎನ್ನ ಮನ್ನಿಸಿ ಕರೆಯೆ । ಚನ್ನೆ ಗುಣಮಣಿಯೆ ॥ ೨ ॥ ಅರಸ ಚಂದ್ರಾಂಗದನ । ತರಳೆ



ನಿನಗೆಣೆಯನ್ನ । ಧರೆಯೊಳ್ಕಾಣೆನು ನಾರಿ । ಸುರತಾನುಕಾರಿ ॥ ೩ ॥ ಮಂದಗಜನಿಭಯಾನೆ । ಚಂದ್ರಸನ್ನಿಭವದನೆ ॥ ಚಂದನಸುಗಂಧಿನಿಯೆ । ಕುಂದರದನೆಯೆ ॥ ೪ ॥ ಸೋತು ಬಂದಿಹೆ ರಮಣಿ । ಪ್ರೀತಿಯಿಂದಲೆ ತರುಣಿ ॥ ಮಾತಾಡು ಮನದೊಳನು । ಮಾನವಿನ್ನೇನು ॥ ೫ ॥ ತಡವ ಮಾಡದಿರೀಗ । ನಿಡುತೋಳಿನೊಳು ಬೇಗ । ಪಿಡಿದಪ್ಪುಯೆಂದೆನಲು । ಜಡಜಾಕ್ಷಿ ನುಡಿದಳ್ ॥ ೬ ॥ ॥ ೫೭ ॥

॥ ರಾಗ, ತಾಳ, (ಯಾಕೊ ನಿನಗೀ) ಎಂಬಂತೆ ॥

ಯಾರೊ ನೀನೀ ಪರಿಯೊಳು ವಿ । ಚಾರಿಸುವದೇನು ॥ ಧೀರರಂಗವಲ್ಲ ಹಿಂದೆ । ಸಾರು ಪೇಳ್ದೆ ನಾನು ॥ ೧ ॥ ಮಗಧದೇಶದರಸ ನಾನು । ಪೆಸರು ಹೇಮರಥನು ॥ ಜಗದೊಳೆನಗಿದಿರು ಕಾಣೆ । ತರುಣಿ ಕೇಳೆ ನೀನು ॥ ೨ ॥ ಗಂಡುಗಲಿಯಾದರಿಂತ । ಲಂಡತನವೇನೊ । ಭಂಡರಂಡದಿಂದ ನುಡಿಯಲ್ । ಪುಂಡನೇನೊ ನೀನು ॥ ೩ ॥ ಪುಂಡರೀಕನೇತ್ರೆ ನಿನ್ನ । ರೂಪು ನೋಡಿ ಭ್ರಮಿಸಿ ॥ ಲಂಡತನವನ್ನು ತಾಳ್ದೆ । ತಿಲಸುಪುಷ್ಪನಾಸೆ ॥ ೪ ॥ ತರವಿದಲ್ಲ ನಾಳೆ ರಾಜ । ಸಭೆಯೊಳ್ಸರ್ವರಿಂದ ॥ ಸುರುಚಿರಾಂಗನಾದರ್ನಿನ್ನ । ವಲಿಸಿಕೊಂಬೆನೆಂದಳ್ ॥ ೫ ॥ ಎನ್ನಿಂದಧಿಕ ರೂಪಯುತರು । ಇರಲಿ ಇಲ್ಲದಿರಲಿ ॥ ರನ್ನೆಯೆನ್ನ ವರಿಸಬೇಕು । ನಿನಗೆ ನೆನಪಿರಲಿ ॥ ೬ ॥ ಈ ತೆರದ ಮಾತ ಕೇಳಿ । ಭಂಡನೀತನೆಂದು ॥ ಮಾತನಾಡದಾಗ ಸತಿಯರ್ । ಸಹಿತ ಪೋದಳೆಂದು ॥ ೭ ॥ ॥ ೫೯ ॥

॥ ಭಾಮಿನಿ ॥

ಕೀರ್ತಿಮಾಲಿನಿ ಸಖಿಯರ್ಸಹಿತಲೆ । ತಾತೆರಳುವದ ಕಂಡು ಭೂಪನು । ಕಾತರಿಸಿ ಕಂಗೆಟ್ಟು ಕಾಮಾಸಕ್ತಿಯೊಳು ನೊಂದು ॥ ಈ ತರಳೆ ತನಗೆಂತು ದೊರೆವಳು । ಪಾತಕಿಯು ಸ್ಮರ ಕೊಲ್ಲುನೆಂದಾ । ಭೂತಳೇಶನು ಬಂದ ತನ್ನವರೀರ್ಪ ಬಳಿಗಾಗಿ ॥ ೧ ॥ ॥ ೬೦ ॥

॥ ವಚನ ॥

ಈ ರೀತಿಯಿಂದ ಹೇಮರಥನು ತನ್ನ ಢೇರೆಯುಂ ಸೇರಿ ದುಮ್ಮಾನದಿಂದೀರ್ಪ ಸಮಯದೊಳಿತ್ತ ಪುರವನಲಂಕಾರವಂ ಮಾಡುತೀರ್ದರದೆಂತೆನೆ ॥ ೧ ॥ ॥ ೬೧ ॥

॥ ವಾರ್ಧಿಕ ॥

ತೋರಣವು ಮೇಲ್ಗಟ್ಟು ಹಾರುತಿಹ ಪಟಗಳಿಂ । ಮೇರುವೆಗಳತಿಶಯದಿ ತೋರದಂಬರವೆನಿಸೆ । ವಾರನಾರಿಯರ ವೈಯಾರ ನರ್ತನಗಳಿಂದಾ ರಾಜ್ಯವೆಡೆಬಿಡದಿರೆ ॥ ವೀರಮಂತ್ರೀಶನಾಜ್ಞೆಯೊಳಖಿಳ ವಸ್ತುಗಳ । ಸೇರಿಸುತ ಕಹಳಾದಿಗಳು ಘೋರವಿಸಲಾಗ । ಭೇರಿ ತಮ್ಮಟ ಪಟಹ ರವದಿಂದ ಸುರಪುರಕೆ ಮಿಾತಾಶ್ಚರ್ಯವೆನಲು ॥ ೧ ॥ ॥ ೬೨ ॥

|| ಭಾಮಿನಿ ||

ಇತ್ತಲೀ ಪರಿ ಪುರವ ಶೃಂಗರಿ । ಸುತ್ತಲಿಹ ಸಮಯದೊಳು ಬಳಿಕಿನೊ । ಳತ್ತ ದ್ರಾವಿಡದರಸ ಸೈನಿಕವೆರಸಿ ನಡೆತಂದ ॥ ಮತ್ತವಂತೀ ವೀರಬಾಹು ಸು । ರೋತ್ತಮನ ವೈಭವದಿ ನಡೆತರ । ಲರ್ತಿಯಿಂದೈತಂದರರಸರು ನಿಷಧ ಪಟ್ಟಣಕೇ ॥ ೧ ॥ || ೬೩ ||

|| ರಾಗ, ಸೌರಾಷ್ಟ್ರ, ತ್ರಿವುಡೆತಾಳ ||

ಬಂದ ಬಂದ ನೃಪಾಲರನು ಕರ । ತಂದು ಉಪಚರಿಸುತ್ತ ಕುಳಿಸುತ । ಲಂದು ಸಭೆಯನು ರಚಿಸಿದನು ಚಂ । ದ್ರಾಂಗ ಭೂಪ ॥ ೧ ॥ ಬಂದಿರೇ ಮಗಧಾಧಿ ನಾಥರು । ಬಂದಿರೇ ದ್ರಾವಿಡದ ಭೂಪರು । ಬಂದಿರೇ ಅವಂತಿ ಮೊದಲಾ । ದ್ಯಖಿಳ ನೃಪರು ॥ ೨ ॥ ಏಸನೆಂಬೆನು ಭೂಪನೆಸಗಿದ । ಮಾನವನು ಪನ್ನೀರು ಸುವಸಿತ । ಪಾನಕವು ಗಂಧೆಣ್ಣೆ ವೀಳ್ಯವ । ತಾನು ಕೊಡುತ ॥ ೩ ॥ ಚಂದದಿಂದಾ ನೃಪತಿ ಸರ್ವರಿ । ಗಂದು ಪಡಿ ಬಿಡಾರವಿತ್ತಾ । ನಂದಗೊಳಿಸುತ್ತಿರಲು ಬಳಿಕಾ । ಅರುಣ ಪುರದಿ ॥ ೪ ॥ ಹಾರುವರು ತಾವೊಂದುಗೂಡುತ । ಚಾರು ಮುಡಿಗಂಟುಗಳ ಕಟ್ಟುತ । ಭೂರಿ ಹರುಷದಿ ಪೊರಟರಾಕ್ಷಣ । ಪರಿಣಯಕ್ಕೆ ॥ ೫ ॥ || ೬೮ ||

|| ರಾಗ, ಅಷ್ಟತಾಳ ||

ಸುಬ್ಬ ಪುರಾಣಿಕ ಧೋತ್ರವನುಟ್ಟು । ಅಬ್ಬರಿಸುತ ಸಣ್ಣ ಮಾಣಿಯ ಕರೆದು ॥ ನಿರ್ಭಯದಿಂದಲಿ ಪೇಳಿದ ನಲಿದು । ಉರ್ಬಿಯೊಳ್ ನಿಷಧೇಶ । ನಲ್ಲಿಗೀಗಲು ॥ ೧ ॥ ಪೋಗಬೇಕಲ್ಲಿ ಸ್ವಯಂವರವಿಂದು । ನಾಗ ಜೋಯಿಸರ್ ಬಂದು ಪೇಳಿ ಪೋಗಿ ಹರು ॥ ಕೂಗದಿರ್ ನೆರೆಮನೆಯವರ್ಕೇಳಿ ಬಹರು । ತ್ಯಾಗಿ ಚಂದ್ರಾಂಗದನೀವ ದಕ್ಷಿಣೆಯ ॥ ೨ ॥ ಅನ್ನ ಪರಮಾನ್ನ ಮೊಸರನ್ನ ಕ್ಷೀರ । ದನ್ನ ಚಿತ್ರಾನ್ನ ಹೋಳಿಗೆ ಲಾಡು ಫೇಣಿ ॥ ಸಣ್ಣರವೆಯ ಉಂಡೆ ಅತಿರಸ ಬಾಳೆ । ಹಣ್ಣು ಸಕ್ಕರೆ ತುಪ್ಪ ಮೆಲಬಹುದೇಳು ॥ ೩ ॥ || ೭೧ ||

|| ಭಾಮಿನಿ ||

ಈ ತೆರದಿ ಬ್ರಾಹ್ಮಣರು ಪರಿ ಪರಿ । ಮಾತನಾಡುತ ಪೋಪ ಭರ ಕಂ । ಡಾ ತರಳ ಭದ್ರಾಯು ಸಖನೊಡನೆಂದನಾಕ್ಷಣದಿ ॥ ನೀ ತಡೆದು ಕೇಳ್ವಿಪ್ರ ವರ್ಯರು । ತಾವ್ತೆರಳುವರದೆಲ್ಲಿಗೆಂಬುದ । ಸಾತಿಶಯದೊಳಗೆನಲು ಕೈಮುಗಿ ದೆಂದನು ಸುನೇತ್ರ ॥ ೧ ॥ || ೭೨ ||

|| ರಾಗ, ಅಷ್ಟತಾಳ ||

ವಿಪ್ರವರ್ಯರು ದಯದಿಂದ ನೀವೆಮ್ಮೊಳು । ಪೇಳಿರೈಯ್ಯ । ಬಹು । ಕ್ಷಿಪ್ರದಿ ಪೋಗುವ ಪರಿಯೆಲ್ಲಿಗೆಂಬುದ । ಪೇಳಿರೈಯ್ಯ ॥ ೧ ॥ ಬಾಲವೃದ್ಧರು ಸಹ ಪೋಗುವ



ಪರಿಯೇನು । ಪೇಳಿರೈಯ್ಯ । ನೀವು । ಜಾಲಗೈಯ್ಯದೆ ಎಮ್ಮೊಳ್ ನಿಜದ ಸಂಗತಿ ಯನ್ನು ಪೇಳಿರೈಯ್ಯ ॥ ೨ ॥ ಹರುಷವು ಮುಖದೊಳು ತುಂಬಿಕೊಂಡಿರುವದು । ಪೇಳಿರೈಯ್ಯ । ಈಗ । ತೆರಳುವದೆಲ್ಲಿಗೆಂದೆಂಬುದ ಕರುಣದಿ । ಪೇಳಿರೈಯ್ಯ ॥ ೩ ॥

|| ಕಂದ ||

ಎಂದಾ ಬಾಲರ ನುಡಿಯಂ । ಚಂದದಿ ಕೇಳ್ದಾ ಭೂಸುರರಾಗಲ್ ॥ ಚಂದ್ರಾಂ ಗದನ ಕುವರಿಗೆ ಸಾ । ನಂದದಿ ಸ್ವಯಂವರವೆಂಬುದ ವಿಸ್ತರದಿ ಪೇಳ್ದರ್ ॥ ೧ ॥

|| ರಾಗ, ಅಷ್ಟತಾಳ ||

ಬಾಲಕರಿರ ಕೇಳಿರೈಯ್ಯ । ನಾವು । ಲೀಲೆಯಿಂ ಪೋಗುವ ಪರಿಯ ॥ ಜಾಲ ಮಾತಲ್ಲ ನಿಶ್ಚಯವಾದ ನುಡಿಯು ನೃ । ಪಾಲ ಚಂದ್ರಾಂಗದನಲ್ಲಿಗೆ ಪೋಪೆವು ॥ ೧ ॥ ತರಳೆಯು ಕೀರ್ತಿಮಾಲಿನಿಗೆ । ಸರಿ । ವರರಿಲ್ಲ ಎಂಬ ಈ ಬಗೆಗೆ ॥ ಕರೆಸಿ ಸಕಲ ರಾಯರನ್ನು ತಾ ಹರುಷದಿ । ವಿರಚಿಸುವನು ಸ್ವಯಂವರ ವನ್ನು ನಿಜವಾಗಿ ॥ ೨ ॥ ತನ್ನ ಮನಕೆ ಸರಿ ಬಾಹ । ವರ । ರನ್ನು ವರಿಸುವಳು ಬಳಿಕ ವಿವಾಹ ॥ ವನ್ನೆಸಗುವನು ಆ ನೃಪತಿಯು ಸಟೆನುಡಿ । ಯನ್ನುಸುರುವರಲ್ಲ ಧಿಟವಿದೀಗೆಂದರು ॥ ೩ ॥ || ೭೯ ||

|| ಭಾಮಿನಿ ||

ಹೀಗುಸುರಿ ಭೂಸುರರು ತೆರಳ । ಲ್ಯಾಗ ಸಖನೊಳು ಪೇಳ್ದ ಭದ್ರನು । ನಾಗವೇಣಿಯ ವರಿಸಬೇಕು ಸ್ವಯಂವರದೊಳೆಂದು ॥ ಬೇಗ ಬಂದಾ ಮಾತೆ ಯಂಘ್ರಿಗೆ । ಬಾಗಿ ವಂದಿಸಿ ಕೈಮುಗಿದು ತಾ । ನಾಗ ಪೇಳಿದನೀ ಸಕಲ ವೃತ್ತಾಂತ ವನು ಬಿಡದೆ ॥ ೧ ॥ || ೮೦ ||

|| ರಾಗ, ಸುರಟಿ, ಏಕತಾಳ ||

ವಾರಿಜಾಕ್ಷಿ ತಾಯೆ । ಧರಣಿಪ । ಹೀರಭುಜನ ಜಾಯೆ ॥ ಧಾರುಣೀಶ ನಿಷಧೇಶನ ಕುವರಿಗೆ । ಭೂರಿ ವಿಭವದೊಳು ರಚಿಪ ಸ್ವಯಂವರ ॥ ೧ ॥ ತೆರಳಿ ನಾನಾಯೆಡೆಗೆ । ತರಳೆಯ । ವರಿಸಿ ಹರುಷದೊಳಗೆ ॥ ಪರಿಣಯಕಾಲದಿ ಕರೆಸುವೆ ನಿನ್ನನು । ಪರಸಿ ಕಳುಹಿಸೀಗ ಕೊರತೆಯಗೊಳ್ಳದೆ ॥ ೨ ॥ ನಾಗಭೂಷನ ದಯವು । ಮತ್ತಾ । ಯೋಗಿವರ್ಯನ ಕೃಪೆಯು ॥ ಈಗೆನುಗಿರುತಿರೆ ತೆರಳಿ ಬೇಗದಿ ಮದ । ನಾಗಗಮನೆಯನು ವರಿಸುವೆ ಮಾತೆಯೆ ॥ ೩ ॥ ನೀಡೆನಗಪ್ಪಣೆಯ । ಮನದೊಳು । ಮಾಡದೆ ಸಂಶಯವ ॥ ಗಾಢದಿ ತರಳೆಯ ವರಿಸೆಂದೆನುತಲಿ । ಮಾಡುತಲಾಶೀ ರ್ವಾದವ ಕಳುಹಿಸು ॥ ೪ ॥ || ೮೪ ||

|| ಭಾಮಿನಿ ||

ತನಯನಾಡಿದ ನುಡಿಗೆ ಸುಮತಿಯು । ಮನದಿ ಹರುಷವನಾಂತು ಪೇಳ್ದಳು । ಮನುಮಥಾರಿಯ ದಯದಿ ಚಂದ್ರಾಂಗದನ ಸುತೆಯಾದ ॥ ವನಜಲೋಚನೆ ಕೀರ್

5

ಮಾಲಿನಿ । ಯನು ವಲಿಸಿ ವೈಭವದಿ ಬಾ ನೀ । ನೆನುತಲಾಶೀರ್ವಚಿಸಿ ಕಳುಹಿದ ಳಾತ್ಮಸಂಭವನ ॥ ೧ ॥ ॥ ೮೫ ॥

॥ ರಾಗ, ಭೈರವಿ, ತ್ರಿವುಡೆತಾಳ ॥

ಈ ತೆರದೊಳಾ ತರಳ ತನ್ನಯ । ಮಾತೆಯಂಘ್ರಿಗೆ ನಮಿಸಿ ಹರುಷದಿ । ಖ್ಯಾತ ಪದ್ಮಾಕರನನುಜ್ಞೆಯು । ಪ್ರೀತಿಯಿಂದಲಿ ಪಡೆದು ಭೂಸುರ । ವ್ರಾತಕಭಿವಂದಿಸುತ ಸಖ ಸು । ನೇತ್ರ ಸಹಿತಾನಂದದಿಂದಲಿ । ನೂತನಾಲಂಕೃತವ ಗೈದು ಮಾ । ನಾಥನನು ಸ್ಮರಿಸುತ್ತ ಮನದೊಳು । ಪೊರಟನಾಗ । ರಥವನು । ಏಂ ಬೇಗ ॥ ೧ ॥ ಕರದಿ ಧನುಶರ ಶಂಖಖಡ್ಗವ । ಧರಿಸಿ ಯೋಗೀವರ್ಯನನು ತಾ । ಸ್ಮರಿಸುತತಿಶಯರೂಪದಿಂದಲಿ । ಸ್ಮರಜಯಂತಾದಿಗಳ ನಿಂದಿಸಿ । ವರಪ್ರಭಾಕರ ತೇಜದಿಂದಲಿ । ಬರುತಿರಲು ಸುವಾಸಿನಿಯರು । ಧರಿಸಿ ಹಸ್ತದಿ ಸುಮಸುಗಂಧವ ಪರಿಪರಿಯ ಫಲ ಸಹಿತಿದಿರ್ಬರೆ । ಹರುಷದಿಂದಾ । ಬಂದನು । ಸುಮತಿಕಂದ ॥ ೨ ॥ ಇತ್ತ ನಿಷಧಾಪುರದಿ ನೃಪತಿಯು । ಪೃಥ್ವಿಪರ ಕರತಂದು ಕುಳ್ಳಿರಿ । ಸುತ್ತ ಸೊಬಗಿನೊಳ್ ಸಭೆಯ ರಚಿಸುತ । ಅರ್ತಿಯಿಂದುಪಚರಿಸುತಿರೆ ಭೂ । ಪೋತ್ತಮನು ಹೇಮಾಖ್ಯ ಗೌರವ । ವೆತ್ತು ನುಡಿದನು ತಡವಿದೇತಕೆ । ಪುತ್ರಿಯನು ಕರೆಸೆನಲು ಕೈರವ । ಮಿತ್ರಕಾಯನು ಸಖಿಯರೊಳು ತಾ । ಕರೆದು ಪೇಳ್ದಾ । ಸುತೆಯನೀವ್ ಕರ । ತನ್ನಿರೆಂದಾ ॥ ೩ ॥ ॥ ೮೮ ॥

॥ ವಾರ್ಧಿಕ ॥

ಭೂತಳಾಧಿಪರೆಲ್ಲ ಕುಳಿತು ಸಭೆಯೊಳ್ತಮ್ಮ । ಚಾತುರ್ಯವೈಭವಗಳಿಂದಲಂಕೃತರಾಗಿ । ಶಾತಕುಂಭಸ್ತನಿಯು ತಮಗೊಲಿವಳೆಂದು ಸಂಪ್ರೀತಿಯಿಂದಿರುತಿರ್ದರು ॥ ಪ್ರಾತಃಕಾಲದ ವಾಸರಾಧಿಪನ ತೇಜದಿಂ । ದಾ ತತಕ್ಷಣಕಲ್ಲಿಗೈತಂದು ಭದ್ರಾಯು । ಪ್ರೀತ ಸಹ ರಥದಿಂದಲಿಳಿದು ಬರೆ ಕಂಡು ನಿಷಧೇಶ ತಾ ಕುಳ್ಳಿರಿಸಿದ ॥ ೧ ॥ ॥ ೮೯ ॥

॥ ಭಾಮಿನಿ ॥

ದಿವಸಪತಿ ತೇಜದಲಿ ರಂಜಿಪ । ಕುವರನನು ಕಂಡೆಲ್ಲ ಭೂಪರು । ಕವಲು ಮನದೊಳಗಿರಲು ಬಳಿಕಾ ಹೇಮರಥ ಭೂಪ ॥ ಇವನು ಪೂರ್ವದಿ ಎನ್ನ ಬಲವನು । ಬವರದಲಿ ಗೆಲಿದಾತನೆಂಸುರೆ । ಜವನ ಭಾವವ ತಳೆದು ನೋಡುತ್ತಿರ್ದ ಭದ್ರನನು ॥ ೧ ॥ ॥ ೯೦ ॥

॥ ಕಂದ ॥

ಇತ್ತಾನಂದದೊಳಾ ಸಖಿಯರು । ಮತ್ತೇಭಯಾನೆ ಕೀರ್ತಿಮಾಲಿನಿಯನು ಬೇಗದಿ ॥ ಉತ್ತಮ ಪನ್ನೀರೊಳು ಮಿಾ । ಸುತ್ತಲಿ ಸರ್ವಾಭರಣಗಳಿಂದಲಂಕರಿಸಿ ಕರೆತಂದರ್ ಸಭೆಗಂ ॥ ೧ ॥ ॥ ೯೧ ॥



॥ ರಾಗ, ಕೇತಾರ, ಅಷ್ಟತಾಳ ॥

ರತಿಯ ನೂರ್ಮಡಿ ರೂಪಿ । ನತಿಶಯದಿಂದೈದಿ । ಪಿತಗೆ ನಮಿಸಿ ನಿಂದಿರೆ । ಅತಿ ಹರುಷದಿ ತೆಗದಪ್ಪಿ ಮುದ್ದಿಸಿ ಪೇಳ್ದ । ಸುತೆಯೊಳ್ ಚಂದ್ರಾಂಗದನು ॥ ೧ ॥ ಕರೆಸಿಹೆ ಸಕಲ ನೃಪಾಲರನೆಲ್ಲರ । ಪರಿಕಿಸಿ ತರಳೆ ನೀನು ॥ ವರಿಸು ನಿನ್ನಯ ಮನ ಬಂದರನೆಂದು ತಾ । ಕರೆತಂದು ತೋರಿಸಿದ ॥ ೨ ॥ ಈತ ಕಳಿಂಗನು ಕಾಂಭೋಜನಾತನು । ಈತ ಕಾಸ್ಮೀರೇಶನು ॥ ಖ್ಯಾತನು ದ್ರಾವಿಡ । ನಾಥ ಬರ್ಹಿಸೇನ । ನೀತನ ನೋಡು ನೀನು ॥ ೩ ॥ ತರಳೆ ನೋಡವ್ವ ನೀನವಂತಿನಾಥನ । ಧುರವಿಜಯನು ಈತನು ॥ ಹರಿಣಾಕ್ಷಿ ನೋಡೀತ ಮಗಧೇಶ ಹೇಮಾಖ್ಯ । ಸ್ಮರಸನ್ನಿಭಾಂಗನವ್ವ ॥ ೪ ॥ ಎಂದಲ್ಲಿ ಸಭೆಯೊಳು ನೆರೆದಿಹ ಭೂಭುಜ । ವೃಂದವ ತೋರಿಸಲು ॥ ಮಂದಗಾಮಿನಿ ನೋಡಿ ಮನಮೆಚ್ಚದಲ್ಲಿಂದ । ಮುಂದಕೈತಂದಳಾಗ ॥ ೫ ॥ ಬಳಿಕ ತೋರಿದ ತನ್ನ ತರಳೆಗೆ ನೃಪತಿಯು । ಎಳೆನೇಸರಿನ ತೇಜದಿ ॥ ಗೆಳೆಯ ಸುನೇತ್ರನ ಕೂಡಿ ವೈಭವದಿಂದ । ಕುಳಿತಿಹ ಭದ್ರಾಖ್ಯನ ॥ ೬ ॥ ಚಪಲಾಕ್ಷಿ ನೋಡೀತನಾರೆಂಬುದರಿಯೆನು । ಉಪಮಾನವಿಲ್ಲೀತಗೆ ॥ ನೃಪಕುವರನು ನಿಜವಲ್ಲದಡೀ ತೇಜ । ಅಪರೂಪ ನೋಡೆ ನೀನು ॥ ೭ ॥ ಎನೆ ಕೀರ್ತಿಮಾಲಿನಿ । ಇನನಂತೆ ತೇಜದಿ । ಮಿನುಗುವನೀತನೀಗ ॥ ತನಗೆಣೆಯಾಗಿಹ । ಇನೆಯನಾಗಿಹನೆಂದು । ಘನಪ್ರೇಮ ವಾಂತು ಬಂದು ॥ ೮ ॥ ಸುಮಶರಸನ್ನಿಭ ಭದ್ರಾಯು ಕೊರಳಿಗೆ । ಸುಮಮಾಲೆಯನು ಹಾಕಲು ॥ ಸುಮನಸರೀಕ್ಷಿಸಿ ದುಂದುಭಿರವ ಗೈದು । ಸುಮವೃಷ್ಟಿ ಸೂಸಿದರು ॥ ೯ ॥ ॥ ೧೦೦ ॥

॥ ವಾರ್ಧಿಕ ॥

ಕಂಡು ನಿಷಧೇಶ ಚಂದ್ರಾಂಗದನು ಯೋಚಿಸುತ । ಪುಂಡುಭೂಪರ ಬಾಧೆಯುಂಟಾಗದಂದದೊಳು । ಖಂಡೆಯದ ಕೈಗಳಿಂದಿಹ ಭಟಾವಳಿಗಳಿಂ ಅಂಗರಕ್ಷೆಗೆ ನಿಲಿಸಲು ॥ ಕಂಡಾಗ ಮಗಧೇಶನಾಂತಸೂಯೆಯನು ಖತಿ । ಗೊಂಡು ಕೆಂಪಡರಿದಾನನದಿಂದ ಕಂಗಳೊಳು । ಕೆಂಡವನು ಸುರಿಸುತಲ್ಲಿಹ ಧರಾನಾಥರನು ಜರೆದು ತಾ ನುಡಿದನಾಗ ॥ ೧ ॥ ॥ ೧೦೧ ॥

॥ ರಾಗ, ಸೌರಾಷ್ಟ್ರ, ತ್ರಿವುಡೆತಾಳ ॥

ಯಾಕೆ ನಿಮಗೀ ಪೌರುಷಾಂಗವಿ । ದೇಕೆ ಯೌವನದುಬ್ಬುಗೊಬ್ಬುಗ । ಛೀಕೆ ಜನ್ಮವಿದೀಗ ಸುಡಿ ಸುಡಿ । ಭೂಪರೆಲ್ಲಾ ॥ ೧ ॥ ಕರೆಸಿ ನಮ್ಮೆಲ್ಲರನು ಮತ್ತೀ । ಧರಣಿಪಾಲನು ಮಾನವನು ಅಪ । ಹರಿಸಿದನು ನಿಮಗೆಲ್ಲ ಹಿತವಾ । ತರರೆ ಚೋದ್ಯ ॥ ೨ ॥ ಯಾವ ಕುಲದವನೀ ಕುಮಾರನು । ಭಾವಕಿಯು ತಾನೊಲಿಸೆ ನಮ್ಮೊಳ । ಗಾವ ಕುಂದನು ಕಂಡಳೀಕೆಯಿ । ದ್ಯಾವ ನ್ಯಾಯ ॥ ೩ ॥ ಭಂಡರಂದದಿ ಕುಳಿತಿರೇತಕೆ । ದುಂಡುಕುಚೆಯನು ಪಿಡಿದು ನೀವೆಳ । ಕೊಂಡು ಬನ್ನಿರೆನುತ್ತ ನುಡಿದ ಭೂ । ಮಂಡಲೇಶ ॥ ೪ ॥ ॥ ೧೦೫ ॥

॥ ಭಾಮಿನಿ ॥

ಹೇಮರಥನಿಂತೆಂದುದನು ಕೇ । ಳ್ದಾ ಮಯೂರಸೇನನಾಕ್ಷಣ । ಕಾಮಿನಿಯ ನೆಳತಹೆನು ತಾನೆಂದೆನುತ ಮುಂಬರಿಯೆ ॥ ಭೂಮಿಪತಿ ಚಂದ್ರಾಂಗದನು ಕಂ । ಡಾ ಮದಾಂಧನ ತಡೆದು ನಿಲಿಸುತ । ಹೋಮನಾಶನ ತೆರದಿ ಘರ್ಜಿಸುತೆಂದ ಶೌರ್ಯದಲಿ ॥ ೧ ॥ ॥ ೧೦೬ ॥

॥ ರಾಗ, ಶಂಕರಾಭರಣ, ಮಟ್ಟೆತಾಳ ॥

ಎಲ್ಲಿ ಪೋಪೆ ದುರುಳ ನೃಪತಿ । ನಿಲ್ಲು ನಿಲ್ಲೆಲೊ ॥ ಒಳ್ಳಿತಲ್ಲ ನಿನಗೀ ಕೆಲಸ । ಖುಲ್ಲ ಸಾರೆಲೊ ॥ ೧ ॥ ಎಲವೊ ನಿನ್ನ ಕುವರಿಯನ್ನು । ಎಳೆದು ತರುವೆನು ॥ ಛಲವಿದೆನ್ನೊಳ್ ನಡೆಯದೀಗ । ತೊಲಗು ಪೇಳ್ದೆನು ॥ ೨ ॥ ಎನಲು ಕೇಳಿ ನಳನ ಪೌತ್ರ ಖನಲಿ ರೋಷದಿ ॥ ಕಣೆಯ ಮಳೆಯಗರೆದನಾಗ । ವೈರಿಯಂಗದಿ ॥ ೩ ॥ ಬರುವ ಶರವ ತರಿವುತಖಿಳ ಸರಳ ಮಳೆಯನು ॥ ಸುರಿಯೆ ಕಂಡು ತರಿದು ಪೇಳ್ದ । ನಿಷಧನಾಥನು ॥ ೪ ॥ ತೀರಿತೀಗ ನಿನ್ನ ಋಣವು ನೋಡೆನುತ್ತಲಿ ॥ ಧೀರ ಶಕ್ತಿಶರವ ಬಿಟ್ಟ ಫಡ ಫಡೆನುತಲಿ ॥ ೫ ॥ ಖಿಡಿಯನುಗುಳುತ್ತೈದೆ ಬಂದು ಶಕ್ತಿ ಬಾಣವು ॥ ಒಡನೆ ಉರಕೆ ತಾಗೆ ಬಿದ್ದ ದ್ರಾವಿಡೇಶನು ॥ ೬ ॥ ॥ ೧೧೨ ॥

॥ ಭಾಮಿನಿ ॥

ಶಕ್ತಿಶರಹತಿಯಿಂದ ಭೂಪನು । ಧಾತ್ರಿಗೊರಗಲು ಕಂಡವಂತೀ । ಧಾತ್ರಿನಾಥನು ವೀರಭುಜ ತಾ ಧರಿಸಿ ಚಾಪವನು ॥ ಚಿತ್ರಕಾಯನ ತೆರದಿ ಘರ್ಜಿಸಿ । ಕ್ಷತ್ರಿಯೋತ್ತಮ ನಿಷಧನಾಥನ । ಹತ್ತಿರಕೆ ನಡೆತಂದು ನುಡಿದನು ಹರಿಯ ತೆರನಂತೆ ॥ ೧ ॥ ॥ ೧೧೩ ॥

॥ ರಾಗ, ಶಂಕರಾಭರಣ, ಮಟ್ಟೆತಾಳ ॥

ಎಲೊ ಮದಾಂಧನೆ। ಎನ್ನೊಳೀ ಪರಿ। ಛಲವು ಸಲ್ಲದು । ಸಾರು ಸುಮ್ಮನೆ ॥ ಜಲಜಲೋಚನೆ । ನಿನ್ನ ಕುವರಿಯ । ಒಲಿದು ಒಪ್ಪಿಸಿ । ಕೊಡಲು ಬದುಕುವೆ ॥ ೧ ॥ ಸಾಕು ಬಲ್ಲೆನು । ಬಾಯ ಪನ್ನಿಯ । ಜೋಕೆಯಿಂದಲಿ । ಸಾರು ದುರುಳನೆ ॥ ಏಕೆ ಬಯಸುವೆ । ಎನ್ನ ಕುವರಿಯ । ಈ ಖಡೂಗದಿ । ಕಡಿದು ಬಿಡುವೆನು ॥ ೨ ॥ ಎನಲು ಕೋಪದಿ । ವೀರಭುಜನು ತಾ । ಅನಲ ಶರವನು । ತೆಗೆದುಬಿಟ್ಟನು ॥ ಘನಪರಾಕ್ರಮಿ । ನಿಷಧನಾಥನು । ವನಸುಶರದೊಳು । ತಮಿಸಿ ಪೇಳ್ದನು ॥ ೩ ॥ ದುರುಳ ಭೂಪನೆ । ಬಿಡುವೀ ಶರದೊಳು । ತರಿದು ಬಿಡುವೆನು । ನಿನ್ನ ಕೊರಳನು ॥ ಪರಿಯ ನೋಡೆನು । ತ್ರಹಿಪನಿತ್ರಿಹ । ಶರವನೆಸೆಯಲು । ಬಂದು ತಾಗಲು ॥ ೪ ॥

॥ ಭಾಮಿನಿ ॥

ಅಹಿಪನಿತ್ರಿಹ ಶರವ ತೆಗೆದೀ । ಮಹಿಪ ಬಿಡೆ ಬಂದುರಕೆ ತಾಗಲು । ಸಹಿಸಲಾರದೆ ತೆರಳ್ದ ಶೈಮಿನಿಪುರಕೆ ವಹಿಲದಲೀ ॥ ಅಹಿಶಯನಸಖಶರಣನಾಕ್ಷಣ ।



ಗಹಗಹಿಸುತಖಿಳಾಸ್ತ್ರದಿಂದಲಿ । ಮಹಿಪರುಗಳನು ಗೆಲಿದು ಘರ್ಜಿಸುತೀರ್ದ ಹರಿಯಂತೆ ॥ ೧ ॥ ॥ ೧೧೮ ॥

॥ ಕಂದ ॥

ಇನಿತೆಲ್ಲರನು ಜೈಸಲು । ಘನ ರೌದ್ರವ ತಾಳ್ದಾ ಮಗಧೇಶಂ ॥ ಮನಸಿಜಾರಿಯ ತೆರದೋಳ್ । ಕಣುಗಳೊಳು ಖಿಡಿಗೆದರುತಲಿಂತೆಂದಂ ॥ ೧ ॥ ॥ ೧೧೯ ॥

॥ ರಾಗ, ಕೇತಾರ, ಅಷ್ಟತಾಳ ॥

ಎಲವೊ ಚಂದ್ರಾಂಗದ ಸಕಲರ ಗೆಲಿದೆನೆಂ । ದುಲಿದು ಗರ್ವಿಸಬೇಡವೊ ॥ ಕಲಹದಿ ನಿನ್ನಯ ತಲೆಯ ತರಿದು ಈಗ । ಎಳದೊಯ್ವೆ ಸುತೆಯ ನೋಡು ॥ ೧ ॥ ಭಂಡ ಮಾತಾಡದಿರನ್ಯರಿಗೊಲಿದೀರ್ದ । ಪುಂಡರೀಕಾಕ್ಷಿಯನು ॥ ಕೊಂಡು ಪೋಗುವೆನೆಂಬ ನಿನ್ನ ದುರ್ನಡತೆಯ । ಕಂಡು ನಗುವರೆಲ್ಲರು ॥ ೨ ॥ ಭಂಡತನವು ನಿನ್ನೊಳಿರುತಿರೆ ಪರರಿಗೆ । ಭಂಡನೆಂದುಸುರಬೇಡ ॥ ಗಂಡುಗಲಿಗಳೀರ್ದು ಸುಕುಮಾರಿಯನ್ನು ಆ । ಪುಂಡ ಪೋರನಿಗಿತ್ತೆಯ ॥ ೩ ॥ ತರಳೆಯು ತನ್ನಯ ಮನಕತಿಹಿತನಾದ । ವರನ ವಲಿಸುವಳೆಂದು ॥ ಬರೆದು ನಾ ಕಳುಹಿದೆನಲ್ಲದೆ ನಿನಗೀವ । ಪರಿಯನು ಬರೆದಿಹೆನೆ ॥ ೪ ॥ ಮೂಢ ಸ್ವಭಾವದಿ ಮಾತನಾಡಲು ಬೇಡ । ರೂಢಿಪಾಲಕನೆ ನೀನು ॥ ಈಡಿಲ್ಲದವನೊಳು ಛಲಬೇಡ ತರಳೆಯ । ಘಾಡದಿಂದೀಯೊ ನೀನು ॥ ೫ ॥ ಮೂಢ ನಾನಲ್ಲ ನಿನ್ನಯ್ಯನು ಪೂರ್ವದಿ । ಕಾಡಿನೊಳಸುರೆಯನು ॥ ಕೂಡಿ ಪೈಶಾಚನಾಗಿರ್ಪನಾ ಪರಿ ಬಲ್ಲೆ । ಬೇಡ ಸಾರಿದೆ ಮೂರ್ಖನೆ ॥ ೬ ॥ ದುಷ್ಟನೆ ಬಗುಳದಿರ್ನಿನ್ನ ಮುತ್ತಾತನು । ಕೆಟ್ಟ ದ್ಯೂತವ ತಾನಾಡಿ ॥ ಸೃಷ್ಟಿಯನೆಲ್ಲವ ಸೋತು ಸತಿ ಸಹ । ನಟ್ಟಡವಿಗೆ ಪೋಗನೆ ॥ ೭ ॥ ನಿನ್ನ ಕುಲದೊಳುದಿಸಿದ ದಶರಥ ಭೂಪ । ತನ್ನರಸಿಯ ಮಾತಿಗೆ ॥ ಸನ್ನುತ ರಾಮನ ವನಕಟ್ಟಲಿಲ್ಲವೆ । ಬಣ್ಣವೆ ರಾಯರಿಗೆ ॥ ೮ ॥ ॥ ೧೨೭ ॥

॥ ರಾಗ, ಅಷ್ಟತಾಳ ॥

ನಿನ್ನ ಮುತ್ತಾತ ನಳನೆಂಬನು । ಸಂ । ಪನ್ನೆ ದಮಯಂತಿಯ ಮರೆತನು ॥ ದುರ್ನೀತಿವಂತನ ಪೌತ್ರನು । ನಿನ । ಗಿನ್ನು ದುರ್ನಡತೆಯು ಸಹಜವು ॥ ೧ ॥ ಸತಿಸುತರನು ಹರಿಶ್ಚಂದ್ರನು । ಮಾರಿ । ಕ್ಷಿತಿಯೊಳ್ ಚಂಡಾಲ ತಾನಾದನು ॥ ಮತಿಹೀನನಾತನ ಕುಲದೊಳು। ಪುಟ್ಟ । ಲತಿಶಯ ಗುಣ ನಿನಗಿಹುದೇನೊ ॥ ೨ ॥ ನೂರು ಯಜ್ಞವಗೈದು ನಹುಷನು । ತಾ । ನೇರಿದ ಸುರರಾಜಾಸನವನ್ನು ॥ ನಾರಿ ಶಚಿಯೊಳ್ ಮೋಹ ಉಂಟಾಗಿ । ತಾನು । ಧಾರುಣಿಗುರುಳ್ದಜಗರನಾಗಿ ॥ ೩ ॥ ದುರುಳ ನಿನ್ನಯ ಪೂರ್ವಜನೋರ್ವ । ನಿಜ । ಗುರುವಿಗೆ ತಾ ನರಮಾಂಸವ ॥ ಭರದಿಂದ ಉಣಿಸುತ್ತ ಪೈಶಾಚ । ನಾಗಿ । ಧರೆಯೆಲ್ಲ ತಿರುಗಿದನಾ ನೀಚ ॥ ೪ ॥ ಕಾರ್ತವೀರ್ಯಾರ್ಜುನನೆಂಬಾತ । ಬಹು । ಧೂರ್ತತನದಿ ಕೊಂದ ಮುನಿಪನ ॥ ಆತನ

ವಂಶದೊಳುದಿಸಿದೆ । ಆ । ರೀತಿ ನಿನ್ನೊಳು ಬಾರದಿರುವುದೆ ॥ ೫ ॥ ದೃಢ ಪರಾಕ್ರಮಿಯಾದ ವಾಲಿಯು । ಬೆಂ । ಗಡೆಯೊಳೆಚ್ಚನು ರಾಮ ಬಾಣವ ॥ ಕಡು ಪರಾಕ್ರಮಿಗಳ ನಡತೆಯೆ । ನಿನ್ನ । ಬೆಡಗಿನ ಪರಿ ಬಲ್ಲೆ ದುರುಳನೆ ॥ ೬ ॥ ಆದಿಯೋಳ್ ಗೀಷ್ಪತಿ ಸತಿಯುನ್ನು । ತಾ । ನ್ಯೊದು ಭೋಗಿಸಿದನು ಚಂದ್ರನು । ಆದನಾತನಿಂದ ಬುಧ ತಾನು । ನೀ । ಪಾದರ ಕುಲದವನೆಂದನು ॥ ೭ ॥ ॥ ೧೩೯ ॥

॥ ರಾಗ, ಮಟ್ಟೆತಾಳ ॥

ಎನಲು ಕೇಳುತಾ । ಖಿನಿಸ ತಾಳುತ । ಖನಲಿ ಶರವ ಬಿಟ್ಟನಾಗ ಫಡ ಫಡೆನ್ನುತ ॥ ೧ ॥ ಬರುವ ಶರವನು । ತರಿದು ಭೂಪನು । ಉರಿಯು ಶರವ ಬಿಟ್ಟನಾಗ ಮಗಧನಾಥನು ॥ ೨ ॥ ಉರಿಯನುಗುಳುತ । ಬರುವ ಶರವನು । ವರುಣಶರದಿ ತರಿದ ಚಿತ್ರವರ್ಮನಳಿಯನು ॥ ೧ ॥ ಕಂಡು ಮಾಗಧ । ಕುಂಡಲೀ ಶರ । ಕೊಂಡು ಬಿಡಲು ಗರುಡಶರದಿ ತರಿದ ನೈಷಧ ॥ ೪ ॥ ನಗಮಹಾಶರ । ತೆಗೆದು ಬಿಡಲವ । ಝುಗಝುಗಿಪ ಕುಲಿಶಶರದಿ ಸಂಹರಿಸಿದ ॥ ೫ ॥ ತಿಮಿರಶರವನು । ಬಿಡೆ ಹೇಮಾಖ್ಯನು । ಕಮಲಮಿತ್ರಶರದಿ ಕಡಿದ ನಳನ ಮೊಮ್ಮನು ॥ ೬ ॥ ॥ ೧೪೦ ॥

॥ ವಾರ್ಧಿಕ ॥

ಈ ತೆರದಿ ಸಕಲ ಮಂತ್ರಾಸ್ತ್ರಂಗಳೆಸುಗೆಯಿಂ । ಚಾತುರ್ಯದಿಂದೋರ್ವ ರೋರ್ವರಂ ಗೆಲ್ವೆನೆಂ । ಬೀ ತೆರದ ಮನದಿಂದ ಕಾದಿದರ್ ಭೂಪರುಗಳೇನೆಂಬೆ ನಚ್ಚರಿಯನು ॥ ಖಾತಿಯಿಂದಾ ನಿಷಧನಾಥ ಬ್ರಹ್ಮಾಸ್ತ್ರವಂ । ತಾ ತೆಗೆದು ಬಿಡಲಾಗ ಘೋರ್ಗರೆವುತ್ತೈತಪ್ಪ । ರೀತಿಯಂ ಕಂಡು ಪ್ರತಿಬ್ರಹ್ಮಾಸ್ತ್ರವೆಚ್ಚದರ ತಣಿಸಿದಂ ಮಗಧೇಶನು ॥ ೧ ॥ ॥ ೧೪೧ ॥

॥ ಭಾಮಿನಿ ॥

ವನಜಭವಶರವಡಗೆ ಕಂಡಾ । ವನಿತೆ ಸೀಮಂತಿನಿಯ ಕಾಂತನು । ಕುಣಿವ ತುಟಗಳ ಸೌಡುಗಚ್ಚುತ ಶೇಷ ತನಗಿತ್ತ ॥ ಘನಸುಶಕ್ತಿಯ ತೆಗೆದು ಮಂತ್ರಿಸಿ । ಮುನಿಸಿನಿಂದೆಸೆಯಲ್ಕೆ ಕಾರ್ಬೊಗೆ । ಯನು ಗರೆವುತ್ತೈದುರಕೆ ತಾಗಲು ಬಿದ್ದ ಧರಣಿಯಲಿ ॥ ೧ ॥ ॥ ೧೪೨ ॥

॥ ಕಂದ ॥

ಘನಶಕ್ತಿಹತಿಯ ಸೈಸದೆ । ಕನಕವರೂಥನು ಧರೆಗುರುಳಲ್ ಕಂಡಾ । ತನ ಬಲ ಬೆದರುತ್ತೋಡಲ್ । ಕ್ಷಣದೊಳ್ ಚೇತರಿಸುತೆದ್ದ ಹಸಿದ ಕೇಸರಿ ವೋಲ್ ॥ ೧ ॥

॥ ರಾಗ, ಭೈರವಿ, ಏಕತಾಳ ॥

ಚೇತರಿಸುತಲೆದ್ದವನು । ಸ । ತ್ವಾತಿಶಯದಿ ಶರವನ್ನು ॥ ಖ್ಯಾತ ಚಂದ್ರಾಂ ಗದಗೆಸೆದು । ಮ । ತ್ತೀ ತೆರನೆಂದನು ಮುಳಿದು ॥ ೧ ॥ ಧುರಸಾಹಸಿಗನು ನಾನು ।



ನೀ । ಬರಿದಲಸದೆ ಸುತೆಯನ್ನು ॥ ಕರೆತಂದೀಕ್ಷಣ ಬೇಗ । ಇಲ್ಲಿ । ಪರಿಣಯ ಗೈಸೆಲೊ ಈಗ ॥ ೨ ॥ ಪರರಂಗೊಲಿದಿಹ ಸತಿಯ । ನೀ । ಸ್ಮರಿಸಲು ನಿನ್ನಯ ತಲೆಯು ॥ ತರಿದಾ ಶೈಮಿನಿಪುರದೀ । ನಾ । ಪರಿಣಯಗೈಸುವೆ ಮುದದಿ ॥ ೩ ॥ ನೀಚಾಧಮ ರಣಹೇಡಿ । ನೀ । ವಾಚಿಸದಿರು ಈ ಮೋಡಿ ॥ ಯೋಚಿಸು ಎನ್ನಯ ಪರಿಯ । ನಾ । ರಾಚದೊಳರಿವೆನು ತಲೆಯ ॥ ೪ ॥ ಹೇಡಿಯು ನೀನಲ್ಲದಿರೆ । ಆ । ರೂಢಿಪ ಪವಿಭುಜನೊಡನೆ ॥ ಖಾಡಾಖಾಡಿಯೊಳ್ ಸೋತು । ನೀ । ನೋಡಿದೆ ಏತಕೊ ಪೇತು ॥ ೫ ॥ ಅಂದಿನ ಪರಿ ಈಗಲ್ಲ । ನೀ । ನಿಂದಿನ ಪರಿ ನೋಡೆಲ್ಲ ॥ ಒಂದೇ ಬಾಣದಿ ತರಿವೆ । ನಿನ್ನ । ನಂದನೆಯನು ಎಳೆದ್ಯೊವೆ ॥ ೬ ॥ ಇಂದಿನ ಪರಿ ನಾನರಿತೆ । ನೀ । ಕುಂದುತ ಮೂರ್ಛೆಯನಾಂತೆ ॥ ಕೊಂದಲ್ಲದೆ ಬಿಡೆ ನಿನ್ನ । ತಾ । ನೆಂದೆಚ್ಚನು ಸರಳನ್ನ ॥ ೭ ॥ ॥ ೧೫೦ ॥

॥ ರಾಗ, ಮಾರವಿ, ಏಕತಾಳ ॥

ಕಲಿ ಚಂದ್ರಾಂಗದನೆಸೆದಿಹ ಶರಗಳ । ಚಳಕದಿ ತಂದಾಗ ॥ ಬಳಿಕೆಂದನು ಹೇಮಾಖ್ಯನು ನಿನ್ನಯ । ತಲೆಯ ರಣಾಗ್ರದಲಿ ॥ ೧ ॥ ಕತ್ತರಿಸುತಲೆಳದ್ಯೊವೆನು ನಿನ್ನಯ । ಪುತ್ರಿಯ ನೋಡೆನುತ ॥ ಶಕ್ತಿಯಿಂದೆಚ್ಚನು ಬಾಣವನಾ ನಳ । ಪೌತ್ರ ನಿಗೇನೆಂಬೆ ॥ ೨ ॥ ಎಚ್ಚ ಶರವ ತರಿದಾಕ್ಷಣ ಪ್ರತಿ ಶರ । ವೆಚ್ಚು ಸುರಿದನೆಲವೊ ॥ ಹುಚ್ಚರ ತೆರದಲಿ ಬಗುಳದಿರ್ ನಿನ್ನನು । ಕೊಚ್ಚುವೆ ನೋಡೆಂದಾ ॥ ೩ ॥ ಮರುಳಲ್ಲದಡಾ ತರಳಗೆ ನಿನ್ನಯ । ತರಳೆಯನೀಡುವೆಯಾ ॥ ಕರೆಸಿಕೊ ಬೆಂಬಲಕಾ ಪರಮೇಶನ । ಕೊರಳನು ಕಾಯುವರೆ ॥ ೪ ॥ ಎನುತಲಿ ಭುಜಗಳ ಹೊಯ್ದೆಂ ದ್ರಾಸ್ತ್ರವ । ಘನಬೇಗದೊಳೆಸೆಯೆ ॥ ಜನಪ ಚಂದ್ರಾಂಗದನುರಕೆರಗಲ್ಕವ । ತನು ಮರೆದೊರಗಿದನು ॥ ೫ ॥ ॥ ೧೫೫ ॥

॥ ಭಾಮಿನಿ ॥

ಹೇಮರಥನೈಂದ್ರಾಸ್ತ್ರಹತಿಯಲಿ । ಭೂಮಿಪತಿ ಮೂರ್ಛೆಯಲಿ ಮಲಗಿರೆ । ಕಾಮಿನೀಮಣಿಯಾದ ಸೀಮಂತಿನಿಯು ನಡೆತಂದೂ ॥ ಪ್ರೇಮದಿಂ ತೆಗೆದೆತ್ತಿ ಕಾಂತನ । ಕೋಮಲದ ತನುವಪ್ಪಿ ಮುದ್ದಿಸಿ । ಹಾ ಮನೋಹರ ಪ್ರಾಣನಾಯಕ ನೆಂದು ಮರುಗಿದಳು ॥ ೧ ॥ ॥ ೧೫೬ ॥

॥ ರಾಗ, ಆನಂದಭೈರವಿ, ಏಕತಾಳ ॥

ಪ್ರಾಣಕಾಂತ ಮಾತನಾಡು । ಮೌನವ್ಯಾತಕೆನ್ನ ನೋಡು । ನಲ್ಲನೆ । ಧುರ ಮಲ್ಲನೆ ॥ ೧ ॥ ಯಾತಕಾಗಿ ಪಾಪಿ ಮಗಧ । ನಾಥನೊಳು ಗೈದೆ ಧುರವ । ನೆಂದಳು । ಹಲುಬಿ । ನೊಂದಳು ॥ ೨ ॥ ಹರನ ಕರುಣ ನಿನ್ನೊಳಿರಲು । ಧುರ ದೊಳಪಜಯವು ಬರಲು । ಪರಿಯೇನು । ತಾ । ನರಿಯೆನು ॥ ೩ ॥ ಅಹಿಪನಿತ್ತ ಶಕ್ತಿಶರದ । ಮಹಿಮೆಯಿಲ್ಲದಾದುದೆ ಹಾ । ಕಾಂತನೆ । ಪ್ರಾಣ । ನಾಥನೆ ॥ ೪ ॥

॥ ಭಾಮಿನಿ ॥

ನಾರಿ ಈ ಪರಿಯಿಂದ ಶೋಕದ । ವಾರಿಧಿಯೊಳೋಲಾಡುತಿರಲಾ । ಭೂರಿ ಬಲ ಕಂಗೆಟ್ಟು ಭಯದಿಂದೀರ್ಪ ಸಮಯದಲಿ ॥ ಧೀರ ಚಂದ್ರಾಂಗದನು ಎದ್ದಾ । ಕ್ರೂರನಾವೆಡೆಯೆಂಬ ಸಮಯದಿ । ಚಾರು ಮೃದುನುಡಿಯಿಂದ ಬಿನ್ನೈಸಿದನು ಭದ್ರಾಕ್ಷ್ಯಾ ॥ ೧ ॥ ॥ ೧೬೧ ॥

॥ ರಾಗ, ಶಂಕರಾಭರಣ, ತ್ರಿವುಡೆತಾಳ ॥

ಮಾವ ಸೈರಿಸು ಸೈರಿಸೀಕ್ಷ್ಣಣ । ನೀವು ಬರಿದೇ ಧುರದೊಳು ॥ ನೋವುದೇತಕೆ ಬೇಡ ಪೋಗುವೆ । ನಾ ಹವಕ್ಕೆ ॥ ೧ ॥ ಉಗುರಿನಿಂದಾ ಮುರಿವ ಚಿಗುರಿಗೆ । ತೆಗೆವರೇನೋ ಕೊಡಲಿಯ ॥ ಹಗೆಯು ಯುದ್ಧದಿ ಎನ್ನ ಜೈಸುವ । ಬಗೆಯ ಕಾಂಬೆ ॥ ೨ ॥ ಇಂದ್ರ ಮೊದಲಾದಖಿಳ ಸುಮನಸ । ವೃಂದ ಬೆಂಬಲಕೀಗಲು ॥ ಬಂದರೆಯು ನಾ ಬಿಡೆನು ಜೈಸದೆ । ಹಂದೆಯುಸ್ಸು ॥ ೩ ॥ ಹೀರಬಾಹುಕುಮಾರನೆಂಬುದ । ಧೀರ ನೀನೀಗರಿಯೆಯು । ನಾರಿ ಸುಮತಿಯು ಕಂದ ಪೆಸರು ಭ । ದ್ರಾಯುಯೆಂದು ॥ ೪ ॥ ಎನಲು ಕೇಳುತ ನಿಷಧನಾಥನು । ವಿನಯದಿಂ ತೆಗೆದಪ್ಪುತ ॥ ಮನದಿ ತಾನಿಂತೆಂದ ತನ್ನಯ । ತನೆಯಳೀಗ ॥ ೫ ॥ ಭಾಗ್ಯಶಾಲಿನಿಯುಹುದು ಧಿಟವಿದು । ಯೋಗ್ಯ ಪುರುಷನ ಸೇರ್ದಳು ॥ ನಾಗಭೂಷನ ದಯದಿ ಧರೆಯೊಳು । ಧನ್ಯನಾದೆ ॥ ೬ ॥ ಎಂದು ಮನ್ನಿಸುತಾಗ ಅಳಿಯನ । ನಂದು ತಕ್ಕೈಸುತ್ತಲಿ ॥ ಕಂದ ನೀ ಪೋಗದಿರು ಧುರಕೆನ । ಲೆಂದನಾಗ ॥ ೭ ॥ ॥ ೧೬೮ ॥

॥ ರಾಗ, ಕೇತಾರಗೌಳ, ಝಂಪೆ ॥

ಮಾವ ಬಿಡು ಸಂಶಯವನು । ಧುರದೊಳಾ । ಭೂವರನ ಗೆಲಿದು ತಾನು ॥ ಸಾವಧಾನದಿ ಬರುವೆನು । ಅಪ್ಪಣೆಯು । ನೀವೀಯಬೇಕೀಗಲು ॥ ೧ ॥ ಸಾಹಸವ ನೋಡಿ ನೀವು । ಬೆಂಬಲಕೆ । ಆ ಹರಿಯೆ ಬರಲು ಬಿಡೆನು ॥ ಸ್ವಾಹರಮಣನ ನೇತ್ರನ । ಕರುಣವಿರ । ಲೀ ಹವವಿದೇಂತಾ ಘನ ॥ ೨ ॥ ನಿಮಿಷದೊಳಗವನ ಬಲವ । ಕಳುಹಿಸುವೆ । ಕಮಲಸಖಪುತ್ರಪುರವ ॥ ಯಮಿವರ್ಯನಿತ್ತ ಖಡ್ಗ । ಶಂಖವಿರೆ । ಸಮರವಿದು ಕಠಿಣವಲ್ಲಾ ॥ ೩ ॥ ಎಂದು ವಂದಿಸೆ ತರಳನು । ಭೂಪತಿಯು । ಅಂದೆತ್ತಿ ಅಳಿಯನನ್ನು ॥ ಕಂದುಗೊರಳನ ಕರುಣದೀ । ಜೈಸಿ ಬಾ । ರೆಂದಿತ್ತ ನೇಮ ಭರದೀ ॥ ೪ ॥ ನೇಮವನು ಪಡೆದು ಭದ್ರಾ । ಸಖನ ಸು । ಪ್ರೇಮದಿಂ ಕರೆದು ಪೇಳ್ದಾ ॥ ನೀ ಮುದದಿ ಸೂತತನವ । ಗೈಯ್ಯೆಂದು । ನೇಮಿಸುತ ರಥವನೇರ್ದ ॥ ೫ ॥ ಸೂತತನವನು ಸುನೇತ್ರ । ಗೈಯ್ಯಲತಿ । ಖ್ಯಾತಿಯಲಿ ಸುಮತಿಜಾತ ॥ ಖ್ಯಾತ ಮಗಧೇಶನೆಡೆಗೆ । ಬರೆ ಕಂಡು । ತಾ ತಡೆದು ನುಡಿದನವಗೆ ॥ ೬ ॥ ॥ ೧೭೪ ॥

॥ ರಾಗ, ಶಂಕರಾಭರಣ, ಮಟ್ಟೆತಾಳ ॥

ಎಲವೊ ಬಾಲ ಯಾರೊ ನೀನು ಎಲ್ಲಿ ಪೋಗುವೆ । ಇಳೆಯೊಳಾರ ತನಯ ನೀಗ ಪೇಳು ಕೇಳುವೆ ॥ ೧ ॥ ಮರೆತೆಯೇನೊ ಹಿಂದೆ ಎನ್ನ ಪಿತನ ಧುರದೊಳು

ಪುಸ್ತಕಸೂಚಿ

ವ. ಸಂ: NR H22

ಕ್ರ. ಸಂ: 4032.

ಲೇಖಕ: ವೆಂಕಪ್ಪಯ್ಯ (ವಾರಂಬಳ್ಳಿ).

ವ. ಸಂ: NR H22

ಕ್ರ. ಸಂ: 4032.

ಕ. ಸಾ. ಪ.
ಗ್ರಂಥ ಭಂಡಾರ